ಬಗ್ಗೆ ವಿಫುಲವಾದ ಚರ್ಚೆ ಮಾಡಬೇಕಾಗಿರುವುದರಿಂದ ದಯಮಾಡಿ ಈ ಬಿಲ್‌ನ್ನು ನಾಳೆ ತೆಗೆದುಕೊಳ್ಳಿ. ದಯಮಾಡಿ ನಾಳೆಗೆ ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದೆಂದು ನನ್ನ ಭಾವನೆ.

ಅಧ್ಯಕ್ಷರು :— ನಾಳೆ ತೆಗೆದುಕೊಳ್ಳೋಣ ಎಂದು ಹೇಳಿದ್ದಾರೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ :— ಮಾನ್ಯ ಸದಸ್ಯರು ಹೇಳುವಂತೆ ಇದು ಬಹಳ ಮಹತ್ವದ ಬಿಲ್ ಆಗಿರುವುದರಿಂದ ಈಗಲೇ ತೆಗೆದುಕೊಳ್ಳಬಹುದಲ್ಲ.

ಶ್ರೀ ಕೆ.ಹೆಚ್. ಹಮನುಮೇಗೌಡ :— ಮಾನ್ಯ ಅಧ್ಯಕ್ಷರೆ, ಬೆಲೆ ಕುಸಿತದ ವಿಚಾರವಾಗಿ ನಾನು ಕೂಡ ಮಾತನಾಡಬೇಕಾಗಿರುವುದರಿಂದ ದಯಮಾಡಿ ತಾವು ನನಗೂ ಅವಕಾಶ ಕಲ್ಪಿಸಿ ಕೊಡಬೇಕಾಗಿ ವಿನಂತಿ.

ಅಧ್ಯಕ್ಷರು :— ಅವರು ಮೊದಲು ಮುಗಿಸಲಿ, ನಂತರ ತಾವು ಮಾತನಾಡಬಹುದು.

10. ನಿಯಮ 69ರ ಮೇರೆಗೆ

ರಾಜ್ಯದಲ್ಲಿ ರೈತರು ಬೆಳೆದಿರುವ ಮೆಕ್ಕೆಜೋಳ, ಭತ್ತ, ಅಲೂಗೆಡ್ಡೆ, ಎಣ್ಣೆಕಾಳುಗಳು, ತೊಗರಿ ಹಾಗೂ ತೆಂಗಿನ ಬೆಲೆಗಳು ಕುಸಿದಿರುವುದು.

+ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಅಧ್ಯಕ್ಷರೆ, ಬೆಲೆ ಕುಸಿತ ಪ್ರಾರಂಭವಾದ ನಂತರ ಇದರ ಬಗ್ಗೆ ಚರ್ಚೆಯೂ ಕೂಡ ಪ್ರಾರಂಭವಾಯಿತು. ಈ ಪರಿಸ್ಥಿತಿ ಹೀಗೆ ಮುಂದುವರೆದರೆ ಬೆಲೆ ಇಳಿದುಹೋಗಬಹುದೇನೋ! ಆದ್ದರಿಂದ, ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ತಮ್ಮಲ್ಲಿ ಕೂಡ ರೈತರ ಸಮಸ್ಯೆಗೆ ಕೊನೆಯ ಆದ್ಯತೆ ಆದರೆ ಅದು ಒಳ್ಳೆಯದಲ್ಲ.

ಅಧ್ಯಕ್ಷರು :— ನಮಗೂ ಕೂಡ ತೆಂಗಿನಕಾಯಿ ಬಗ್ಗೆ ಪರ್ಸನಲ್ಲಾಗಿ ಎಫೆಕ್ಟ್ ಆಗಿದೆ.

ಶ್ರೀ ವೈ.ಕೆ. ರಾಮಯ್ಯ :— ತಮ್ಮ ಪೀಠದಿಂದ ರೈತರ ಸಮಸ್ಯೆಗೆ ಕೊನೆಯ ಆದ್ಯತೆ ಸಿಗುವುದು ಬೇಡ, ಮೊದಲನೇ ಆದ್ಯತೆ ದೊರಕಲಿ ಎಂದು ನಾನು ತಮ್ಮಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

5.20 ಪಿ.ಎಂ.

(ಈ ಹಂತದಲ್ಲಿ ಸನ್ಮಾನ್ಯ ರಾಜುಗೌಡರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

+ಶ್ರೀ ವೈ.ಕೆ. ರಾಮಯ್ಯ :— ಸನ್ಮಾನ್ಯ ಅಧ್ಯಕ್ಷರೆ, ಹಿಂದಿನ ದಿವಸದಲ್ಲಿ ಈ ವಿಷಯದ ಮೇಲಿನ ಚರ್ಚೆಯನ್ನು ನಾನು ಪ್ರಾರಂಭ ಮಾಡಿದ್ದೆ. ಆದರೆ ಇನ್ನೂ ಮುಗಿಸಿರಲಿಲ್ಲ. ಆದ್ದರಿಂದ, ಇದೇ ವಿಷಯವನ್ನು ಇವತ್ತಿನದಿವಸ ಮುಂದುವರಿಸಿಕೊಂಡು

ಹೋಗುತ್ತೇನೆ. ಇವತ್ತಿನದಿವಸ ರೈತರು ಬೆಳೆದಂಥ ಬೆಳೆಗೆ ಕೇವಲ ಬೆಲೆ ಕುಸಿತ ಅಷ್ಟೇ ಅಲ್ಲ, ಬೆಲೆಯ ಏರಿಳಿತ ಬಹಳ ಪ್ರಮುಖವಾದಂಥ ಸಮಸ್ಯೆಯಾಗಿದೆ. ಬೆಲೆ ಹೆಚ್ಚು ಇರುವಂಥ ವರ್ಷದಲ್ಲಿ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಆದರೆ ಈ ಬೆಳೆ ಬರುವಷ್ಟರಲ್ಲಿ ಬೆಲೆ ಕಡಿಮೆಯಾಗುತ್ತದೆ. ಆ ಸಂದರ್ಭದಲ್ಲಿ ಇದನ್ನು ತೆಗೆದುಕೊಂಡು ಹೋಗಿ ಬೀದಿಗೆ ಸುರಿಯುತ್ತಾರೆ. ನಾನು ಈಗಾಗಲೇ ಹೇಳಿದಂತೆ, ಬೆಲೆ ಕಡಿಮೆಯಾಗುವುದರ ಜೊತೆಗೆ ಬೆಲೆಯ ಏರಿಳಿತ ಕೂಡ ರೈತನಿಗೆ ದೊಡ್ಡ ಸಮಸ್ಯೆಯಾಗಿದೆ. ಅನೇಕ ವಸ್ತುಗಳ ಬೆಲೆ ಹೆಚ್ಚಾಗುವುದಕ್ಕೆ ಮತ್ತು ಕಡಿಮೆ ಆಗುವುದಕ್ಕೆ ನಾನಾ ಕಾರಣಗಳಿವೆ. ಬಹಳ ಪ್ರಮುಖವಾದಂಥ ಕಾರಣ ಯಾವುದೆಂದರೆ, ಯಾವ ವಸ್ತುವಿನ ಉತ್ಪತ್ತಿ ಜಾಸ್ತಿಯಾಗುತ್ತದೆಯೋ, ಆ ವಸ್ತುವಿನ ಉತ್ಪತ್ತಿಗೆ ಬೇಡಿಕೆ ಕಡಿಮೆಯಾಗುತ್ತದೆ. ಈ ಸಂದರ್ಭದಲ್ಲಿ ಸ್ವಾಭಾವಿಕವಾಗಿ ಬೆಲೆ ಕಡಿಮೆಯಾಗತಕ್ಕಂಥ ಪರಿಸ್ಥಿತಿಯನ್ನು ನಾವು ಎಲ್ಲಾ ಕಾಲದಲ್ಲಿಯೂ ಸಹ ಕಾಣುತ್ತೇವೆ. ಇದರ ಜೊತೆಗೆ ಬೆಲೆಗಳು ಕಡಿಮೆ ಆಗುವುದಕ್ಕೆ ಇನ್ನು ಅನೇಕ ಕಾರಣಗಳಿವೆ. ನಮ್ಮ ಸ್ನೇಹಿತರು ಬೆಲೆ ಕುಸಿಯಲಿಕ್ಕೆ ಆಗಿರತಕ್ಕಂಥ ಕಾರಣಗಳನ್ನು ಪತ್ತೆಹಚ್ಚುವುದಕ್ಕೆ ಮಾಡಿದಂಥ ಪ್ರಯತ್ನವನ್ನು ನಾನು ನೋಡಿದೆ. ಇವತ್ತಿನದಿವಸ ನಮ್ಮಲ್ಲಿ ಸಾಕಷ್ಟು ಕೃಷಿ ಉತ್ಪನ್ನಗಳು ಉತ್ಪತ್ತಿಯಾಗುತ್ತಿದ್ದರೂ ಕೂಡ ಹೊರದೇಶಗಳಿಂದ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುತ್ತಿರುವ ಒಂದು ಅನಿಷ್ಟ ಪದ್ಧತಿಯಂದ ಬೆಲೆ ಕುಸಿತಕ್ಕೆ ಮುಖ್ಯ ಕಾರಣವಾಗಿದೆ. ನಾನು ಈ ಪದವನ್ನು ಸುಮಾರು 25 ವರ್ಷಗಳಿಂದ ಉಪಯೋಗ ಮಾಡುತ್ತಿದ್ದೇನೆ. ಇವತ್ತಿನದಿವಸ ಕೃಷಿ ಉತ್ಪನ್ನಗಳನ್ನು ಹೊರದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ಅನಿಷ್ಟ ಪದ್ಧತಿಯಿಂದ ಈ ನಾಡಿನಲ್ಲಿ ಮತ್ತು ರಾಷ್ಟ್ರದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಮತ್ತು ಇದರಿಂದ ಈ ನಾಡಿನ ಕೃಷಿಕರ ಕಣ್ಣೀರಿನ ಕಡಿಗೆ ಕಾರಣ ಎನ್ನತಕ್ಕಂಥ ಒಂದೇ ಒಂದು ಕಾರಣವನ್ನು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವತಂತ್ರ, ಸ್ವಾಭಾವಿಕ ಮತ್ತು ಸ್ವೇಚ್ಛೆಯಾಗಿ ಈ ವಿಷಯಗಳ ಬಗ್ಗೆ ಚರ್ಚೆ ನಡೆಯಲಿ, ಇದಕ್ಕೆ ಪಕ್ಷ ಭೇದಗಳು ಬೇಡವೆಂದು ಮಾನ್ಯ ವಿರೋಧಪಕ್ಷದ ನಾಯಕರಾದಂಥ ಸನ್ಮಾನ್ಯ ಜಗದೀಶ್ ಶೆಟ್ಟರ್‌ರವರು ಅತ್ಯಂತ ಉತ್ತಮವಾದಂಥ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಉದಾರೀಕರಣ, ಆಮದು ಮತ್ತು ಮುಕ್ತ ಮಾರುಕಟ್ಟೆ ಮಾಡುವುದಕ್ಕಾಗಿ ಏನೇನು ಕಾರಣಗಳಿವೆ ಎಂಬುದನ್ನು ನಾವು ನೋಡಬೇಕಾಗುತ್ತದೆ. ನನ್ನ ಸ್ನೇಹಿತರಾದ ಸನ್ಮಾನ್ಯ ಸಿಂಧ್ಯರವರು ಸಹ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತಾ, `You have to come out from the world Trade Organisation' (W.T.O) ಎಂದು ಹೇಳಿದರು. ಒಟ್ಟಾರೆ ಇದರ ಸಾರಾಂಶ ಏನೆಂದರೆ, ಬ್ರಿಟೀಷರ ಕಾಲದಿಂದ ಚರಿತ್ರೆಯನ್ನು ನಾವು ನೋಡಿಕೊಂಡು ಬರುತ್ತಿದ್ದೇವೆ. ನಮ್ಮಲ್ಲಿ ಸಾಕಷ್ಟು ಉತ್ಪತ್ತಿ ಇದ್ದರೂ ಸಹ, I say this `a pretext'; ಈ ಕುಂಟು ನೆಪವನ್ನು ಕೊಟ್ಟು ಹೊರದೇಶಗಳಿಂದ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳತಕ್ಕಂಥ ಕೆಟ್ಟ ಪದ್ಧತಿ ಅಥವಾ ಅನಿಷ್ಟ ಪದ್ಧತಿ ಈ ದೇಶದಲ್ಲಿ ಕೇವಲ ಬೆಲೆ ಕಡಿಮೆ ಆಗುವುದಕ್ಕೆ

ದಾರಿಯಾಗುವುದಿಲ್ಲ. ಕಾಲಾಂತರದಲ್ಲಿ ಇಡೀ ಕೃಷಿ ಉದ್ಯಮ ನಾಶ ಆಗುವಂತಹ ಅಪಾಯ ನಮ್ಮ ಮುಂದೆ ಇದೆ. ಕೃಷಿ ಉತ್ಪನ್ನಗಳ ಬೆಲೆ ಜಾಸ್ತಿ ಮಾಡುವುದಕ್ಕೋಸ್ಕರ ಉತ್ಪತ್ತಿಯನ್ನು ಕಡಿಮೆ ಮಾಡತಕ್ಕಂಥಾದ್ದು ದಡ್ಡತನ ಆಗುತ್ತದೆ. ನಮ್ಮ ದೇಶದಲ್ಲಿ ಬೆಳೆಯತಕ್ಕಂಥ ಕೃಷಿ ಉತ್ಪನ್ನಗಳಾದ ರೇಷ್ಮೆ, ಟೊಮೆಟೋ ಮತ್ತು ಹೂ,ಹಣ್ಣುಗಳು ಹಾಗೂ ಇನ್ನು ಅನೇಕ ವಸ್ತುಗಳ ಗುಣಮಟ್ಟ ಸರಿಯಿಲ್ಲ; ಆದ್ದರಿಂದ ನಮಗೆ ಉತ್ತಮ ಗುಣಮಟ್ಟದ ವಸ್ತುಗಳು ಬೇಕಾಗಿರುವುದಕ್ಕೋಸ್ಕರ ನಾವು ಆಮದು ಮಾಡಿಕೊಳ್ಳುತ್ತೇವೆ ಎನ್ನತಕ್ಕಂಥ ಒಂದು ಕುಂಟು ನೆಪವನ್ನೂ ಆಮದು ಮಾಡಿಕೊಳ್ಳುವ ಅನಿಷ್ಟ ಪದ್ಧತಿಯನ್ನು ಅನುಸರಿಸತಕ್ಕಂಥ ಜನರು ಹೇಳುತ್ತಾರೆ. ನಾನೊಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ; ಅದೇನೆಂದರೆ, ಈ ನಾಡಿನಲ್ಲಿ ಕೃಷಿ ಉತ್ಪನ್ನಗಳ ಗುಣಮಟ್ಟ ಕಡಿಮೆ ಆಗಿದ್ದರೆ, ಆ ಗುಣಮಟ್ಟವನ್ನು ಹೆಚ್ಚಿಗೆ ಮಾಡಲಿಕ್ಕೆ ಮತ್ತು ಸುಧಾರಣೆ ಮಾಡಲಿಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೇ ಹೊರತು ಗುಣಮಟ್ಟ ಸರಿಯಾಗಿಲ್ಲ, ಆ ಕಾರಣದಿಂದ ಹೊರದೇಶಗಳಿಂದ ಗುಣಮಟ್ಟ ಇರತಕ್ಕಂಥ ವಸ್ತುಗಳನ್ನು ಆಮದು ಮಾಡಿಕೊಳ್ಳುತ್ತೇವೆಂದು ಹೇಳತಕ್ಕಂಥದ್ದು ಅತ್ಯಂತ ದಡ್ಡತನದ ಪರಮಾವಧಿ ಆಗುತ್ತದೆ. ನಮ್ಮ ಕೃಷಿ ಉತ್ಪನ್ನಗಳಿಗೆ ಗುಣಮಟ್ಟ ಇಲ್ಲ ಎನ್ನತಕ್ಕಂಥ ಕಾರಣದಿಂದಾಗಿ ವಸ್ತುಗಳನ್ನು ಆಮದು ಮಾಡಿಕೊಳ್ಳುವಂಥಾದ್ದು ಸರಿಯಾದ ಕಾರಣವಲ್ಲ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶದಲ್ಲಿ ಯಾವ್ಯಾವುದಕ್ಕೋ ಕೊರತೆ ಇದೆ. ಆದರೆ ನನ್ನ ಪ್ರಕಾರ ಅತ್ಯಂತ ಹೆಚ್ಚಿನ ಕೊರತೆ ಇರತಕ್ಕಂಥಾದ್ದು ಎಂದರ ಪ್ರಾಮಾಣಿಕ ವ್ಯಕ್ತಿಗಳ ಕೊರತೆ. ಇಂಥ ಪ್ರಾಮಾಣಿಕ ವ್ಯಕ್ತಿಗಳನ್ನು ಆಮದು ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ? ಎಂಬುದನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ದೇಶಕ್ಕೆ ಇವತ್ತಿನ ದಿವಸ ಗುಣಮಟ್ಟದ ವಸ್ತುಗಳು ಬೇಕಾಗಿಲ್ಲ, ಗುಣಮಟ್ಟದ ಜನರು ಬೇಕಾಗಿದ್ದಾರೆ. ಮೊನ್ನೆದಿವಸ ಇವರೆಲ್ಲರೂ ಎಸ್.ಡಿ.ಡಿ.ಬಿ.ಗೆ ಹೋಗಿದ್ದರು. ಆ ಸಂದರ್ಭದಲ್ಲಿ ನಾನು ಕೂಡ ಹೋಗಿದ್ದೆ. ಈ ಸಂದರ್ಭದಲ್ಲಿ ಅಲ್ಲಿನ ಕಾರ್ಯದರ್ಶಿಯವರು ಏನು ಕೇಳಿದರೆಂದರೆ, can you give me a list of honest officers who can implement the projects promptly? ಎಂದು ಕೇಳಿದರು. ಗುಣಮಟ್ಟದ ಕೃಷಿ ವಸ್ತುಗಳು ನಮ್ಮಲ್ಲಿ ಇಲ್ಲವೆಂದು ನೀವು ಟೊಮೆಟೋ ಮತ್ತು ರೇಷ್ಮೆ ಹಾಗೂ ಸಕ್ಕರೆಯನ್ನು ಆಮದು ಮಾಡಿಕೊಳ್ಳುವುದಾದರೆ, ಗುಣಮಟ್ಟದ ಜನರನ್ನು ನೀವು ಆಮದು ಮಾಡಿಕೊಳ್ಳುವುದಕ್ಕೆ ಆಗುತ್ತದೆಯೇ? ಇದು ಸಾಧ್ಯವಾಗುವುದಿಲ್ಲ. ಆದ್ದರಿಂದಲೇ ಇದಕ್ಕೆ ನ್ಯಾಯಯುತವಾದ ಬೇಸ್ ಇಲ್ಲವೆಂದು ನಾನು ಹೇಳುತ್ತಿದ್ದೇನೆ. ಈ ನಾಡಿನಲ್ಲಿ ಇರತಕ್ಕಂಥ ಕೃಷಿ ಉತ್ಪನ್ನಗಳ ಬೆಲೆಯನ್ನು ಸ್ಥಿರೀಕರಣಗೊಳಿಸುವುದಕ್ಕಾಗಿ ಮತ್ತು ಆಕಾಶಕ್ಕೆ ಹೋಗುತ್ತಿರತಕ್ಕಂಥ ಬೆಲೆಯನ್ನು ಇಳಿಸಲಿಕ್ಕೆ ನಾವು ಆಮದು ಮಾಡಿಕೊಳ್ಳುತ್ತೇವೆ ಎನ್ನತಕ್ಕಂಥ ಇನ್ನೊಂದು ಕುಂಟು ನೆಪವನ್ನು ನಮ್ಮ ಮುಂದೆ ಇಟ್ಟು ಆಮದನ್ನು ಮಾಡಿಕೊಳ್ಳತಕ್ಕಂಥ ಪರಿಸ್ಥಿತಿಯನ್ನು ಸೃಷ್ಟಿ ಮಾಡಿದ್ದಾರೆ. ನನಗೆ ಅರ್ಥವಾಗದೇ ಇರತಕ್ಕಂಥ ವಿಷಯ ಏನೆಂದರೆ,

1976ನೇ ಇಸವಿಯಲ್ಲಿ ನಾನು ಕೇವಲ 26 ಸಾವಿರ ರೂಪಾಯಿಗಳನ್ನು ಕೊಟ್ಟು ಒಂದು ಅಂಬಾಸಿಡರ್ ಕಾರನ್ನು ಖರೀದಿ ಮಾಡಿದ್ದೆ. ಇವತ್ತು ಅದೇ ಅಂಬಾಸಿಡರ್ ಕಾರಿನ ಬೆಲೆ 5 ಲಕ್ಷ ರೂಪಾಯಿಗಳಾಗಿದೆ. Can you afford to import cars. Because they will attend to your needs during elections. ಆವತ್ತಿನ ದಿಮಸ 26 ಸಾವಿರ ರೂಪಾಯಿಗಳಿದ್ದ ಅಂಬಾಸಿಡರ್ ಕಾರಿನ ಬೆಲೆ ಇವತ್ತು 5 ಲಕ್ಷ ರೂಪಾಯಿಗಳಾಗಿರುವ ಪ್ರಕಾರ ಇವತ್ತಿನದಿಮಸ ಯಾವ ಕೃಷಿ ಉತ್ಪನ್ನ ವಸ್ತುಗಳ ಬೆಲೆ ಇಷ್ಟು ಪ್ರಮಾಣದಲ್ಲಿ ಜಾಸ್ತಿಯಾಗಿಲ್ಲ. ಆದ್ದರಿಂದ ಕೈಗಾರಿಕಾ ವಸ್ತುಗಳನ್ನು ನೀವೇಕೆ ಆಮದು ಮಾಡಿಕೊಳ್ಳುತ್ತಿಲ್ಲ? I make this allegation irrespective of the parties which are in power. ಈ ರಾಷ್ಟ್ರದ ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಸ್ಥರು ಚುನಾವಣೆ ಸಂದರ್ಭದಲ್ಲಿ ನಿಮ್ಮನ್ನು ಚೆನ್ನಾಗಿ ನೋಡಿಕೊಳ್ಳುತ್ತಾರೆ ಎಂಬ ಕಾರಣಕ್ಕಾಗಿ ಕೈಗಾರಿಕಾ ವಸ್ತುಗಳನ್ನು ಈ ದೇಶಕ್ಕೆ ಆಮದು ಮಾಡಿಕೊಳ್ಳುವಂಥ ಪದ್ಧತಿಯನ್ನು ಮಾಡುತ್ತಿಲ್ಲ. ಆದರೆ, ಕೃಷಿ ಉತ್ಪನ್ನಗಳ ಬೆಲೆ ಜಾಸ್ತಿ ಆಯಿತು, ಆದ್ದರಿಂದ ಇದನ್ನು ಸ್ಟೆಬಲೈಜ್ ಮಾಡಬೇಕು ಎನ್ನತಕ್ಕಂಥ ಕಾರಣಕ್ಕಾಗಿ ಈ ದೇಶಕ್ಕೆ ನೀವು ಹೊರಗಡೆಯಿಂದ ಅವುಗಳನ್ನು ಆಮದು ಮಾಡಿಕೊಂಡರೆ, ಅದು ಅತ್ಯಂತ ಕೆಟ್ಟ ಪದ್ಧತಿಯಾಗುತ್ತದೆ. ಹಾಗೆಯೇ ಅದು ಕೃಷಿ ಉದ್ಯಮವನ್ನು ನಾಶ ಮಾಡುತ್ತದೆ. ತೆಂಗಿನಕಾಯಿ, ಭತ್ತ ಮತ್ತು ರಾಗಿಗಿಂತ ಹೆಚ್ಚಾಗಿ ಉಪ್ಪು, ಖಾರಕ್ಕೆ ಗತಿ ಇರತಕ್ಕಂಥಾದ್ದು ರೇಷ್ಮೆ ಬೆಳೆ ಮಾತ್ರ. ನಮ್ಮಲ್ಲಿ ಗುಣಮಟ್ಟದ ರೇಷ್ಮೆ ಇಲ್ಲ, ಹೊರದೇಶಗಳಿಗೆ ರಫ್ತು ಮಾಡುವ ಗುಣಮಟ್ಟದ ಬಟ್ಟೆಗಳನ್ನು ತಯಾರು ಮಾಡಬೇಕಾದರೆ ಒಳ್ಳೆಯ ಗುಣಮಟ್ಟದ ರೇಷ್ಮೆ ಬೇಕು. ಆದ್ದರಿಂದ, ಆಮದು ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಆದರ ಗುಣಮಟ್ಟವನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನ ಮಾಡಬೇಕೇ ಹೊರತು ಗುಣಮಟ್ಟದ ವಸ್ತುಗಳನ್ನು ಹೊರಗಡೆಯಿಂದ ಆಮದು ಮಾಡಿಕೊಳ್ಳತಕ್ಕಂಥಾದ್ದು ಬುದ್ಧಿವಂತಿಕೆಯ ಲಕ್ಷಣವಲ್ಲ. ಬೈಪೋಲ್ಟಿನ ಸಿಲ್ಕ್ ಇಲ್ಲಿ ಬೆಳೆಯುವುದಿಲ್ಲ; ಆದ್ದರಿಂದ ಹೊರಗಡೆಯಿಂದ ಆಮದು ಮಾಡಿಕೊಳ್ಳುತ್ತೇವೆಂದು ಹೇಳುತ್ತಾರೆ. ಸನ್ಮಾನ್ಯ ಬೈರೇಗೌಡರು ಈ ಸಂದರ್ಭದಲ್ಲಿ ಸದನದಲ್ಲಿ ಇಲ್ಲ. ಇವರು ಅನೇಕ ಸಂದರ್ಭದಲ್ಲಿ ಇಸ್ರೇಲ್‌ನಲ್ಲಿರತಕ್ಕಂಥ ವ್ಯವಸಾಯ ಪದ್ಧತಿಗೂ ಮತ್ತು ನಮ್ಮ ವ್ಯವಸಾಯ ಪದ್ಧತಿಗೂ ಹೋಲಿಕೆ ಇಲ್ಲ ಎಂದು ಹೇಳುತ್ತಿದ್ದರು. What is relevant there is not relevant here. ಹಿಂದೆ ಒಂದು ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳಿದ್ದೆ. ಅದೇ ಮಾತನ್ನು ಈಗಲೂ ಹೇಳುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ, ಅಮೇರಿಕಾ ಮತ್ತು ಜಪಾನ್ ಹಾಗೂ ಇನ್ನಿತರ ವೆಸ್ಟರ್ನ್ ಕಂಟ್ರಿಗಳಲ್ಲಿರತಕ್ಕಂಥ ಹೆಣ್ಣುಮಕ್ಕಳು ಬಹಳ ಕಷ್ಟಪಟ್ಟು ಪರಂಗಿ ಹಣ್ಣು ಇರುವ ರೀತಿಯಲ್ಲಿ ಅಂದರೆ, ಕಿಂಪಾದ ಮಕ್ಕಳನ್ನು ಹೆರುತ್ತಾರೆ. Can we afford to beat up our wives for having delivered babies in black colour. ಈ ದಡ್ಡತನದ ಉದಾಹರಣೆ ಇದೊಂದು ಪರಮಾವಧಿಗೆ ಅಲ್ಲವೆ?

ಅಲ್ಲಿ ಹೆಣ್ಣುಮಗಳು ಬಿಳಿ ಮಗುವನ್ನು ಹೆರುತ್ತಾಳೆಂದು, ಭಾರತದೇಶದಲ್ಲಿ ನೀನೇಕೆ ಬಿಳಿ ಮಗುವನ್ನು ಹೆರಲಿಲ್ಲವೆಂದು ಹೆಂಡತಿಯನ್ನು ಹಿಡಿದುಕೊಂಡು ಹೊಡೆದರೆ ಎಷ್ಟು ದಡ್ಡತನದ ಪರಮಾವಧಿ ಆಗುತ್ತದೆಯೋ, ಅದೇ ರೀತಿಯಲ್ಲಿ ಬೈವೋಲ್ಟಿನ್ ರೇಷ್ಮೆಯನ್ನು ಇಲ್ಲಿ ಬೆಳೆಯಬೇಕು ಎನ್ನತಕ್ಕಂಥಾದ್ದು ದಡ್ಡತನದ ಪರಮಾವಧಿ ಆಗುತ್ತದೆ. ಈ ಒಂದು ಕಾರಣಕ್ಕಾಗಿ ನಾನು ಪ್ರಾರ್ಥನೆ ಮಾಡಿಕೊಳ್ಳುವುದೇನೆಂದರೆ, ಯಾವುದೇ ದೃಷ್ಟಿಯಿಂದ ವಿಷಯವನ್ನು ನಾವು ವಿಶ್ಲೇಷಣೆ ಮಾಡಿದರೆ, ಈ ದೇಶಕ್ಕೆ ಹೊರ ದೇಶಗಳಿಂದ ಕೃಷಿ ಉತ್ಪನ್ನ ವಸ್ತುಗಳನ್ನು ಆಮದು ಮಾಡಿಕೊಳ್ಳುವುದರಿಂದ ಕೇವಲ ಉತ್ಪನ್ನದ ಬೆಲೆಗಳು ಕಡಿಮೆಯಾಗುವುದಿಲ್ಲ, ಕೃಷಿ ಬೆಳೆ ಸಂಪೂರ್ಣವಾಗಿ ನಾಶವಾಗುತ್ತದೆ. ನಮ್ಮ ದೇಶದಲ್ಲಿರತಕ್ಕಂಥ ರೇಷ್ಮೆ ಬೆಲೆಗಿಂತ ಕಡಿಮೆ ದರದಲ್ಲಿ ಚೈನಾದವರು ರೇಷ್ಮೆ ಬೆಳೆಯನ್ನು ನಮ್ಮ ದೇಶಕ್ಕೆ ಮಾರಾಟ ಮಾಡಲು ಸಿದ್ಧರಿದ್ದಾರೆ. ನಮ್ಮ ದೇಶವನ್ನು ಉದ್ಧಾರ ಮಾಡಬೇಕೆಂದಾಗಲಿ ಅಥವಾ ರೈತರಿಗೆ ಸಹಾಯ ಅಥವಾ ನಮ್ಮ ದೇಶದ ರೇಷ್ಮೆ ಉದ್ಯಮವನ್ನು ಉನ್ನತಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂಬುದು ಅವರ ಉದ್ದೇಶ ಅಲ್ಲ. ರೇಷ್ಮೆಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡುವುದರ ಮುಖಾಂತರ ನಮ್ಮ ನಾಡಿನ ರೇಷ್ಮೆ ಬೆಲೆ ಕಡಿಮೆ ಆಗಿ ರೈತರು ರೇಷ್ಮೆ ಹುಳುವಿಗೆ ಬೇಕಾಗಿರತಕ್ಕಂಥ ಉಪ್ಪನೇರಳೆ ಕಡ್ಡಿಯನ್ನು ಕಿತ್ತು ಹಾಕಿ ಇಡೀ ಉದ್ಯಮ ನಾಶವಾದರೆ, India cannot compete with China in the international market. ನಮ್ಮ ರೈತರನ್ನು ನಾಶ ಮಾಡುವುದಕ್ಕಾಗಿ ಈ ರೀತಿಯಾದ ಕುತಂತ್ರಗಳನ್ನು ಹೊರದೇಶದವರು ಮಾಡುತ್ತಿದ್ದಾರೆ. ಆದ್ದರಿಂದ ಈ ಆಮದು ಮಾಡಿಕೊಳ್ಳತಕ್ಕಂಥ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ನಾನು ಮನಃಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಕೃಷಿಕರ ಹಿತದೃಷ್ಟಿಯಿಂದ ಯಾವ ಪಕ್ಷದ ಸರ್ಕಾರದವರು ಇವತ್ತಿನದಿವಸ ಅಧಿಕಾರದಲ್ಲಿ ಇದ್ದಾರೆಯೋ ಅವರ ಮೇಲೆ ಒತ್ತಾಯ ತರಬೇಕೆಂದು ನನ್ನ ಸ್ನೇಹಿತರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಉದಾರೀಕರಣ, ಡಬ್ಲ್ಯೂಟಿಓ ಇದರ ಬಗ್ಗೆ ಎಲ್ಲರೂ ಮಾತನಾಡುವಾಗ ನಾನು ಸುಮ್ಮನೆ ಕುಳಿತು ಅವರ ವಾದವನ್ನು ಕೇಳಿದೆ. 1991ನೇ ಸಾಲಿನಲ್ಲಿ ಮಾನ್ಯ ಶ್ರೀ ಪಿ.ವಿ. ನರಸಿಂಹರಾಯರು ಪ್ರಧಾನ ಮಂತ್ರಿಯಾಗಿದ್ದ ಕಾಲದಲ್ಲಿ ಶ್ರೀ ಮನಮೋಹನಸಿಂಗ್ ರವರು ಆರ್ಥಿಕ ಸಚಿವರಾಗಿದ್ದಾಗ ಈ ಉದಾರೀಕರಣದ ನೀತಿಯನ್ನು ಜಾರಿಗೆ ತಂದರು. ಆವತ್ತಿನಿಂದ ಈ ಉದಾರೀಕರಣದ ನೀತಿಯ ಫಲವಾಗಿ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಕಾರಣಕ್ಕಾಗಿ ನಾನು ಇಲ್ಲಿ ಹೇಳಬೇಕಾಗಿ ಬಂದಿರುತ್ತದೆ; ಅದರಿಂದ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತಿದೆ ಎನ್ನುವ ಮಾತನ್ನು ಅವರು ಇಲ್ಲಿ ಹೇಳಿದರು. ನಾನು ಇದನ್ನು ಸತ್ಯವೆಂದು ಒಪ್ಪಿಕೊಂಡರು ಕೂಡ at the time of introducing this system, there was a list called "Negative List". ಆದರೆ ಆ ನೆಗೆಟಿವ್ ಲಿಸ್ಟ್‌ನ್ನು ಇವತ್ತು ಸ್ಕಾಪ್ ಮಾಡಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :— ಮಾನ್ಯ ಅಧ್ಯಕ್ಷರೇ, ಡಬ್ಲ್ಯೂಟಿಒ ಎನ್ನತಕ್ಕಂಥಾದ್ದು ಸರ್ವೇಸಾಮಾನ್ಯವಾಗಿ ಈ ಸದನದಲ್ಲಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ, ಮತ್ತು ಸದನದ ಹೊರಗಡೆ ಕೂಡ ಒಂದು ಅಭಿಪ್ರಾಯ ಏನಿದೆ ಎಂದರೆ, ಅದು 1991ನೇ ಸಾಲಿನಲ್ಲಿ ಪ್ರಾರಂಭವಾಯಿತು, ಎನ್ನುವಂಥ ಒಂದು ಅಭಿಪ್ರಾಯವಿದೆ. ಆದರೆ ಅದು 1947 ರಲ್ಲಿ ಗ್ಯಾಟ್ ಎಂದು ಪ್ರಾರಂಭವಾಯಿತು. ಇಂಡಿಯಾ ಸಿಗ್ನೇಟರಿಯಾಗಿದ್ದು 1948ರಲ್ಲಿ ...

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಎರಡನೇ ಮಹಾಯುದ್ಧವಾದ ಮೇಲೆ, ಯಾವ್ಯಾವ ದೇಶಗಳು ಈ ಮಹಾಯುದ್ಧದಲ್ಲಿ ಭಾಗವಹಿಸಿದ್ದರು ಅವರ ಒಂದು ಆರ್ಥಿಕ ಅಭಿವೃದ್ಧಿಯ ಸಲುವಾಗಿ ಜನರಲ್ಲಾಗಿ ಟ್ರೇಡ್ ಆ್ಯಂಡ್ ಟ್ಯಾರಿಫ್ ಎಂದು ಮಾಡಿಕೊಳ್ಳುತ್ತಾರೆ. ಇದು ಬಿಳಿಯ ಕೆಲವು ರಾಷ್ಟ್ರಗಳು ಮಾತ್ರ, ಹಾಗೂ ಶ್ರೀಮಂತರು ಇರುವ ರಾಷ್ಟ್ರಗಳು ವ್ಯವಸಾಯದಲ್ಲಿ ಟೆಕ್ನಾಲಜಿಯನ್ನು ಅಡಾಪ್ಟ್ ಹೊಂದಿದಂತಹ ರಾಷ್ಟ್ರಗಳು 1948ರಲ್ಲಿ ಒಂದು ಗ್ಯಾಟ್ ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ, ಇದು ಕೇವಲ ಒಪ್ಪಂದವಷ್ಟೆ. ಇದಾದನಂತರ 1968ರಲ್ಲಿ ಅಮೇರಿಕಾದಲ್ಲಿ ಎಂಟರ್ ಆಗುತ್ತದೆ. ನಾವು 1991ರಲ್ಲಿ ಎಂಟರ್ ಆಗಿ ಡಬ್ಲ್ಯೂಟಿಒಗೆ ಸಹಿಯನ್ನು ಮಾತ್ರ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಎರಡನೆಯ ಮಹಾಯುದ್ಧವಾದ ಮೇಲೆ ಶೋಷಣೆಗೆ ಒಳಗಾದ ಎಲ್ಲ ದೇಶಗಳು ಸೇರಿ ಅವರಲ್ಲಿ ಒಂದು ಒಡಂಬಡಿಕೆಯಾಗಿ ಗ್ಯಾಟ್ ಆಕ್ಟ್ ಆಫ್ 1947 ಎಂದು ಬರುತ್ತದೆ. ಆದರಲ್ಲಿ ಇಂಡಿಯಾ ಪ್ರವೇಶ ಆಗತಕ್ಕಂಥಾದ್ದು 1948ರಲ್ಲಿ ಮೊದಲಿಗೆ ಇದರಲ್ಲಿ ಕೇವಲ 16 ದೇಶಗಳು ಮಾತ್ರ ಇದ್ದವು. ವರ್ಷವರ್ಷಕ್ಕೆ ದೇಶಗಳು ಜಾಸ್ತಿಯಾಗುತ್ತಾ ಬಂದು, ಈಗ ಇರತಕ್ಕಂಥಾದ್ದು, 1994ರಲ್ಲಿ ಡೆಂಕಲ್ ಅಥರ್ ಪ್ರಕಾರ ಗ್ಯಾಟ್‌ನಿಂದ ಅಷ್ಟೊಂದು ವ್ಯಾಪಕವಾಗಿ ಸಹಾಯವಾಗುತ್ತಿಲ್ಲ, ಅದಕ್ಕೆ ಒಂದು ಶಾಸನಬದ್ಧವಾದ ಕಾನೂನು ಇಲ್ಲವೆಂದು ಡೆಂಕಲ್‌ನ ರಿಪೋರ್ಟ್ ಆಧಾರದ ಮೇಲೆ ಡಬ್ಲ್ಯೂಟಿಒ ಬಂದಿರತಕ್ಕಂಥಾದ್ದು. Automatically India became a signatory, because India is a Founder Member of GATT. ಹಾಗಾಗಿ ಇದು ಬಂದಿದೆಯೇ ವಿನಹಃ ಕಾಂಗ್ರೆಸ್ ಸರ್ಕಾರವಿದ್ದಾಗ ಅಥವಾ ಶ್ರೀ ಪಿ.ವಿ. ನರಸಿಂಹರಾವ್‌ರವರು ಇದ್ದಾಗ ಡಬ್ಲ್ಯೂಟಿಒಗೆ ಸಹಿ ಆಯಿತು ಎಂದು ಅಲ್ಲ. 1948ರಿಂದ We are signatory for this agreement and it is automatic. That is continued. ಈಗ 158 ರಲ್ಲಿ ದೇಶಗಳಲ್ಲಿ 135 ದೇಶಗಳು ಇವತ್ತು ಸಿಗ್ನೇಟರೀಸ್ ಆಗಿರತಕ್ಕಂಥಾದ್ದು. ಇದರಿಂದ ಹೊರಗಡೆ ಇರತಕ್ಕಂಥ ದೇಶಗಳು ಯಾವುವೆಂದರೆ, ಒಂದು ಇಸ್ಲಾಮಿಕ ದೇಶ, ರಷ್ಯಾ, ಚೈನಾ, ಇವತ್ತು ಚೈನಾದವರು ಕೂಡ ಡಬ್ಲ್ಯೂಟಿಒ ಒಳಗಡೆ ಬರಬೇಕೆಂದು ಪ್ರಯತ್ನವನ್ನು ನಡೆಸಿದ್ದಾರೆ. ಇನ್ನು ಕೆಲವು ದೇಶಗಳು ಮಾತ್ರ

ಹೊರಗಡೆ ಇರತಕ್ಕಂಥಾದ್ದು, ಏಕೆ ಈ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತಿದ್ದೇನೆಂದರೆ, ಇಷ್ಟು ಮುಂದುವರಿದ ಸಂದರ್ಭದಲ್ಲಿ ಕೂಡ ನಾವು ಅದರಿಂದ ಹೊರಗಡೆ ಬರುವುದಕ್ಕೆ ಸಾಧ್ಯವೇ? ಅದರ ಜೊತೆಗೆ ಶಾಸನಬದ್ಧವಾಗಿರತಕ್ಕಂಥ ಕಾನೂನನ್ನು Intellectual property Right Act. ಇವತ್ತು ಪಾರ್ಲಿಮೆಂಟ್‌ನ ಮುಂದಿದೆ, ಅದಕ್ಕಾಗಿ ಕಾನೂನು ಬದಲಾವಣೆಗಳನ್ನು ತಂದಿರುವ ಸಂದರ್ಭದಲ್ಲಿ ಕೂಡ ನಾವು ಅದರಿಂದ ಮಾಪಸ್ಸು ಬರುವುದಕ್ಕೆ ಸಾಧ್ಯವೇ ಎನ್ನುವ ಪ್ರಶ್ನೆ ಕೂಡ ಇವತ್ತು ನಮ್ಮ ಮುಂದೆ ಇದೆ. ಏಕೆಂದರೆ, ಮಾನ್ಯ ಸದಸ್ಯರು ಮಾತನಾಡುವಾಗ ನಾವು ಅಗ್ರಿಮೆಂಟ್ ಆನ್ ಅಗ್ರಿಕಲ್ಚರ್‌ದಿಂದ ಹೊರಗಡೆ ಬರಬೇಕು ಎಂದು ಹೇಳಿ ಈ ಎಲ್ಲ ವಿಷಯಗಳು ಬಂದದ್ದಕ್ಕಾಗಿ ನಾನು ಹೇಳಿರುತ್ತೇನೆ, ಈ ವಿಷಯದಲ್ಲಿ ಕೂಡ ಚರ್ಚೆಯಾದರೆ ನಾನು ಉತ್ತರವನ್ನು ಕೊಡುವ ಸಂದರ್ಭದಲ್ಲಿ ಕೊಡುತ್ತೇನೆ. ಇಲ್ಲಿ ನಮ್ಮ ಸ್ಟ್ಯಾಂಡ್ ಏನು ಎನ್ನತಕ್ಕ ಪ್ರಶ್ನೆ ಇಲ್ಲಿ ಬರುವುದಿಲ್ಲ. ರಾಜ್ಯದ ಕೃಷಿ ವಿಷಯವಾದರೂ ಕೂಡ, in the name of food security, the entire powers are exercised by Govt. of India. ತಾವು ಆಗಲೀ ಏನು ಹೇಳಿರುತ್ತೀರಿ, ನಮ್ಮನ್ನು ಯಾವುದೇ ಒಂದು ಗ್ಯಾಟ್ ಅಗ್ರಿಮೆಂಟ್‌ಗೆ ಆಗಲಿ, ಡಬ್ಲ್ಯೂಟಿಒ, ಪ್ರಶ್ನೆಯಾಗಲಿ, ಕ್ವಾಂಟಿಟಿ ರಿಸ್ಟ್ರಿಕ್ಷನ್ ತೆಗೆಯುವ ಸಂದರ್ಭವಾಗಲಿ, ಓಪನ್ ಜನರಲ್ ಲೈಸೆನ್ಸ್ ಕೊಡುವ ಸಂದರ್ಭದಲ್ಲಿಯಾಗಲಿ ಯಾವುದೇ ಸಂದರ್ಭದಲ್ಲಿ ಕೂಡ ರಾಜ್ಯ ಸರ್ಕಾರವನ್ನು ಅವರು ಗಮನಕ್ಕೆ ತೆಗೆದುಕೊಳ್ಳುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ತಾವು ಇದುವರೆಗೆ ಹೇಳಿರುವುದು ಕೇವಲ ಚರಿತ್ರೆಯ ಪಾಠಮಾತ್ರ, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇದರಲ್ಲಿ ರಾಜ್ಯ ಸರ್ಕಾರದ ನಿಲುವು ಏನು? You have already formed a Committee of Officers about this W.T.O. ಇದರ ಬಗ್ಗೆ ಚರ್ಚೆಯಾಗುತ್ತಿದೆ. ನೀವು ಮಾತೆತ್ತಿದರೆ ಡೆಲ್ಲಿ ಕಡೆಗೆ ಕೈ ತೋರಿಸುತ್ತೀರಿ. ಅವರು ಮಾಡಿದ್ದು, ರಿಸ್ಟ್ರಿಕ್ಷನ್ ತೆಗೆಯಬೇಕು, ಎಫ್‌ಸಿಐ-ದವರು ಕೂಡ ಪರ್ಚೇಸ್ ಮಾಡಬೇಕಾದರೂ ಸಹ ನಾರ್ಮ್ಸ್‌ನ್ನು ಅವರು ರಿವೈಸ್ ಮಾಡಬೇಕೆಂದು ನೀವು ಮೂವರು ಮಂತ್ರಿಗಳು ಅವರ ಕಡೆ ಕೈಯನ್ನು ತೋರಿಸುತ್ತಿದ್ದೀರಿ. ನೀವು ಡೆಲ್ಲಿಗೆ ಹೋಗಿ ಬರುವುದನ್ನು ಮಾಡುತ್ತಲೇ ಇದ್ದೀರಿ, ಆದರೆ ರಾಜ್ಯದಲ್ಲಿ ರೈತರು ಗಲಾಟೆಯನ್ನು ಮಾಡುತ್ತಿದ್ದಾರೆ. What is the stand of the said Committee. What is the sub Committee's report. ಒಂದೊಂದು ಇಲಾಖೆಯಲ್ಲಿ 6 ತಿಂಗಳು, ಒಂದು ವರ್ಷ ಮಾತ್ರ ಐ.ಎ.ಎಸ್. ಅಧಿಕಾರಿಗಳು ಕೆಲಸವನ್ನು ಮಾಡುತ್ತಾರೆ. ಅವರು ಡಬ್ಲ್ಯೂಟಿಒ ಬಗ್ಗೆ ಒಂದು ವರದಿಯನ್ನು ನಿಮಗೆ ಕೊಟ್ಟಿದ್ದಾರೆ, ಅದರ ಆಧಾರದ ಮೇಲೆ ನೀವು ಹೇಳುತ್ತೀರಿ. What is your stand? Can you lead this country in this regard. If you are really committed to the cause of farmers, let the Karnataka Government led by Sri. S.M. Krishna pass a resolution in this House.

We are prepared. We are partners of N.D.A. We are prepared. Let it be discussed thereadbare. You have no stand:

ಶ್ರೀ ಟಿ.ಬಿ. ಜಯಚಂದ್ರ :— ತಾವು ಹೇಳಿದಂಥ ರೀತಿಯಲ್ಲಿ ಡಬ್ಲ್ಯೂಟಿಓ ಎನ್ನುವ ಒಂದು ಸೆಲ್ ಕೇಂದ್ರ ಸರ್ಕಾರದಲ್ಲಿದೆ.

Sri. P.G.R. Sindhya :— Sir, I forget to mention one point. ತಾವು ಅಗ್ರಿಕಲ್ಚರ್ ಮಿನಿಸ್ಟರ್ ಆಗಿ ಬಹಳ ಸೆನ್ಸಿಬಲ್ ಸ್ಟೇಟ್‌ಮೆಂಟ್‌ಗಳನ್ನು ಕೊಟ್ಟಿರುತ್ತೀರಿ, ತಾವು ಯೀಲ್ಡ್ ಆಗಬೇಕು. ಮಲ್ಟಿನ್ಯಾಷನಲ್ ಕಾನ್ಫರೆನ್ಸ್ ಆದ ಸಂದರ್ಭದಲ್ಲಿ ತಾವು ಏನು ಹೇಳಿರುತ್ತೀರಿ ಎನ್ನುವುದು ಇಡೀ ರಾಜ್ಯಕ್ಕೆ ಗೊತ್ತಿದೆ. ಇಲ್ಲಿ ಮಲ್ಟಿನ್ಯಾಷನಲ್ ಕಂಪನಿಗಳು ಬಂದು, ಕುದುರೆ ತರಹ ಇಲ್ಲಿ ಮೆಯಿದು ಬಿಟ್ಟು ಹೊರರಾಷ್ಟ್ರಕ್ಕೆ ಹೋಗಿ ಲದ್ದಿ ಹಾಕುತ್ತದೆ ಎನ್ನುವ ಮಾತು ನೂರಕ್ಕೆ ನೂರು ಸತ್ಯವಾಗಿರತಕ್ಕಂಥ ಮಾತು. ಇದೊಂದೇ ವಿಷಯ ಅಲ್ಲ, ನೀವು ಇನ್ನೂ ಅನೇಕ ವಿಚಾರಗಳನ್ನು ಹೇಳಿರುತ್ತೀರಿ. ಇವತ್ತು ನೀವು ನಿಜವಾಗಿಯೂ ರೈತರಿಗೆ ಸಹಾಯ ಮಾಡಬೇಕು ಎನ್ನುವುದಿದ್ದರೆ ಅದನ್ನು ನೀವು ಸಚಿವ ಸಂಪುಟದಲ್ಲಿ ತೀರ್ಮಾನ ಮಾಡಿ ಇವತ್ತು, ನಾಳೆಯೆನ್ನುವುದರೊಳಗಾಗಿ ಒಂದು ಠರಾವು ತೆಗೆದುಕೊಂಡು ಬನ್ನಿ ಆಗ ನಾವು ನಿಮ್ಮನ್ನು ಅಪ್ರಿಸಿಯೇಟ್ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ :— ಈಗಾಗಲೇ ಕೇಂದ್ರ ಸರ್ಕಾರದಲ್ಲಿ ಡಬ್ಲ್ಯೂಟಿಓದ ಒಂದು ಸೆಲ್ ಕ್ರಿಯೇಟ್ ಮಾಡಿದ್ದಾರೆ. ಈ ದೇಶದಲ್ಲಿರತಕ್ಕಂಥ ಎಲ್ಲ ರಾಜ್ಯಗಳಿಗೆ ನಿರ್ದೇಶನವನ್ನು ಕೊಟ್ಟು ಅದೇರೀತಿಯಾಗಿ ಒಂದೊಂದು ಸೆಲ್‌ನ್ನು ಕ್ರಿಯೇಟ್ ಮಾಡಲು ಹೊರಟಾಗ, ಕರ್ನಾಟಕ ಸರ್ಕಾರ ಮಾತ್ರ ಈ ಡಬ್ಲ್ಯೂಟಿಓ-ದ ಸೆಲ್‌ನ್ನು ಕ್ರಿಯೇಟ್ ಮಾಡಿರತಕ್ಕಂಥಾದ್ದಾಗಿದೆ. ನಾವು ಕೂಡ ಈಗಾಗಲೇ ಸೆಲ್‌ನ್ನು ಕ್ರಿಯೇಟ್ ಮಾಡಿ ಅದಕ್ಕೆ ಆಸಕ್ತಿ ಇದ್ದವರನ್ನು ಹಾಗೂ ವಿಶ್ವವಿದ್ಯಾನಿಲಯದವರನ್ನು ಇನ್‌ವಾಲ್ವ್ ಮಾಡಿದ್ದೇವೆ, ಈಗಾಗಲೇ ಅದರ ವರದಿ ಕೂಡ ಸಂಪೂರ್ಣವಾಗಿದೆ. ಇನ್ನು 4-5 ದಿನಗಳಲ್ಲಿ ಸಂಪೂರ್ಣವಾದ ವರದಿ ನಮ್ಮ ಕೈಗೆ ಸಿಗುತ್ತದೆ. ಆ ವರದಿ ಬಂದ ನಂತರ, ತಮ್ಮೆಲ್ಲರನ್ನು ಕೂಡ, ರಾಜ್ಯದ ಸಂಸತ್ ಸದಸ್ಯರನ್ನೂ ಕರೆದು ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಎಲ್ಲರೊಡನೆ ಚರ್ಚೆ ಮಾಡಿ ನಮ್ಮ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದರ ಬಗ್ಗೆ ಆ ವರದಿಯನ್ನು ಆಧರಿಸಿ ಹೇಳುತ್ತಾರೆ, ಅದನ್ನು ನಾವು ಮಾಡಿದ್ದು ಏಕೆಂದರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ನಾವು ಬೆಳೆಯತಕ್ಕಂಥ ಬೆಳೆಗಳಿಗೆ ಯಾವ ರೀತಿಯಾದ ತೊಂದರೆಯಾಗುತ್ತದೆ, ನಮ್ಮ ನಿಲುವು ಏನು ಇರಬೇಕು ಎನ್ನುವುದರ ಬಗ್ಗೆ ಇಂಡಿಪೆಂಡೆಂಟ್ ಆಗಿ ಒಂದು ತೀರ್ಮಾನವನ್ನು ಕೊಡಲಿ ಎನ್ನುವ ದೃಷ್ಟಿಯಿಂದ ಟಾಸ್ಕ್ ಫೋರ್ಸ್‌ನ್ನು ಮಾಡಿರುತ್ತೇವೆ. ಅದು ವಿಶ್ವವಿದ್ಯಾನಿಲಯವನ್ನು ಹಾಗೂ ಎಲ್ಲರನ್ನು ಸೇರಿಸಿ ಮಾಡಿರುವ ಒಂದು ಕಮಿಟಿಯಾಗಿದೆ. ನಾವು ರೈತ ಸಂಘಟನೆಗಳು ಹಾಗೂ ಮುಖಂಡರ ಅಭಿಪ್ರಾಯಗಳನ್ನು

ತೆಗೆದುಕೊಂಡಿರುತ್ತೇವೆ. ನಮ್ಮ ರಾಜ್ಯ ಸರ್ಕಾರದ ಪರವಾಗಿ, ನಾನು ಮಂತ್ರಿಯಾಗಿ ನನ್ನ ನಿಲುವು ಏನು ಎನ್ನುವುದನ್ನು ಕೊಟ್ಟಿರುತ್ತೇನೆ. ಇದೆಲ್ಲವನ್ನು ಕ್ರೋಢೀಕರಿಸಿ ಒಂದು ವರದಿಯನ್ನು ಇನ್ನು ಒಂದು ವಾರ ಅಥವಾ 10 ದಿನಗಳಲ್ಲಿ ಕೊಡುತ್ತೇವೆ; ಇದರ ಬಗ್ಗೆ ನಾನು ಬೆಳಿಗ್ಗೆ ಕೂಡ ಹೇಳಿರುತ್ತೇನೆ. ಆಮೇಲೆ ಇದರ ಬಗ್ಗೆ ಚರ್ಚೆ ಮಾಡಿ ನಮ್ಮ ರಾಜ್ಯ ಸರ್ಕಾರದ ನಿಲುವು ಏನು ಎನ್ನುವುದನ್ನು ಸ್ಪಷ್ಟಪಡಿಸುವಲ್ಲಿ ನಾವು ಯಾವತ್ತೂ ಕೂಡ ಹಿಂದೆ ಬೀಳುವುದಿಲ್ಲ. ಈ ಪಾಲಿಸಿಯಿಂದಾಗಿ ರಾಜ್ಯಸರ್ಕಾರಕ್ಕೆ ಏನು ತೊಂದರೆಯಾಗಿದೆ ಎನ್ನುವುದನ್ನು ನಾವು ಈಗಾಗಲೇ ನೋಡುತ್ತಿದ್ದೇವೆ. ಆದ್ದರಿಂದ ನಾವು ಯಾವುದನ್ನು ಮರೆಮಾಚತಕ್ಕಂಥ ಪ್ರಶ್ನೆಯಿಲ್ಲ, ತಮ್ಮ ಜೊತೆ ಚರ್ಚೆ ಮಾಡಿ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಾವು ಯಾವೊತ್ತೂ ಬದ್ಧರಾಗಿರುತ್ತೇವೆ.

ಶ್ರೀ ವೈ.ಕೆ. ರಾಮಯ್ಯ :— ಈ ಒಂದು ವಿಷಯ ಬಹಳ ಗಹನವಾದ ಮತ್ತು ಆಳವಾದ ಒಂದು ಚರ್ಚೆಗೆ ಅವಕಾಶ ಮಾಡಿಕೊಡುತ್ತದೆಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಡಬ್ಲ್ಯೂಟಿಒ ಎಂದು ಹೇಳತಕ್ಕಂಥ ವಿಷಯ ಬಹಳ ಸುಲಭವಾದದ್ದು, ಪ್ರಪಂಚದಲ್ಲಿ ಸ್ಪರ್ಧೆಗೆ ಹಿಂಜರಿಯುವುದಾದರೆ ಭಾರತದೇಶ ಮುಂದುವರೆಯುವುದಕ್ಕಾಗುವುದಿಲ್ಲ. ಆ ದೃಷ್ಟಿಯಿಂದ ಹೇಳುವುದಾದರೆ ಸ್ಪರ್ಧಾತ್ಮಕ ಮಾರುಕಟ್ಟೆಯಲ್ಲಿ ಭಾಗವಹಿಸುವುದು ನಮಗೆ ಅನಿವಾರ್ಯ, ಸ್ಪರ್ಧಾತ್ಮಕವಾದಂತಹ ಕೃಷಿ ಮಾರುಕಟ್ಟೆಯಲ್ಲಿ, ರಾಷ್ಟ್ರಮಟ್ಟದಲ್ಲೆಲ್ಲ, ವಿಶ್ವಮಟ್ಟದಲ್ಲಿ ನಾವು ಭಾಗವಹಿಸಬೇಕಾದರೆ ನಮ್ಮ ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಸುಧಾರಣೆ ಮಾಡುವುದು ಅಷ್ಟೇ ಅನಿವಾರ್ಯವಾಗಿದೆ. ಅದಕ್ಕಾಗಿ ನಾನು ತಮ್ಮಲ್ಲಿ ಪ್ರಾರ್ಥಿಸುತ್ತೇವೆ. ಗುಣಮಟ್ಟವನ್ನು ಹೆಚ್ಚಿಸುವ ದಿಸೆಯಲ್ಲಿ ಉತ್ತಮವಾದಂತಹ ತಳಿಗಳನ್ನು ಕಂಡುಹಿಡಿಯುವಂತಹ ದೃಷ್ಟಿಯಲ್ಲಿ, ಅದನ್ನು ವೃದ್ಧಿ ಮಾಡುವಂತಹ ದೃಷ್ಟಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಂಡು ರಾಷ್ಟ್ರದಲ್ಲಿ ಕೃಷಿ ಉತ್ಪನ್ನಗಳ ಗುಣಮಟ್ಟವನ್ನು ಹೆಚ್ಚಿಸುವ ಕಡೆಗೆ ಗಮನವನ್ನು ಕೊಡಬೇಕಾದುದು ಅತ್ಯಂತ ಜರೂರು ಕ್ರಮವಾಗಬೇಕಾಗುತ್ತದೆ. ಅದನ್ನು ಬಿಟ್ಟು ವರ್ಲ್ಡ್ Trade ಆರ್ಗನೈಜೇಷನ್‌ನಿಂದ ಈಚೆಗೆ ಬನ್ನಿ ಎಂದು ಹೇಳುವುದು ತಾತ್ಕಾಲಿಕವಾಗಿ ಸರಿ ಎಂದು ಕಾಣಬಹುದು. It will not be a long term remedy. ಆ ಒಂದು ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. it is the only remedy ಎಂದು ನಮ್ಮ ಸ್ನೇಹಿತರು ಹೇಳುತ್ತಿದ್ದಾರೆ. ನನ್ನ ದೃಷ್ಟಿಯಿಂದ ಹೇಳುವುದಾದರೆ, ವಿಶ್ವ ಮಾರುಕಟ್ಟೆಯಲ್ಲಿ ಭಾರತದೇಶ ತಲೆಯನ್ನು ಎತ್ತಿ ನಿಲ್ಲಬೇಕಾದರೆ ತನ್ನ ಗುಣಮಟ್ಟವನ್ನು ಸುಧಾರಿಸಿಕೊಳ್ಳಲೇ ಬೇಕಾಗುತ್ತದೆ; ಇದು ನಿರ್ವಿವಾದವಾಗಿದೆ. ಆದರೆ ಇದಕ್ಕೆ ಚಿಕ್ಕದಾರಿಗಳು, ಅಡ್ಡದಾರಿಗಳನ್ನು ಹಿಡಿಯುವುದು ಬೇಡ; ಈ ಅನುದಾನದ ಬಗ್ಗೆ ಬಹಳ ವರ್ಷಗಳಿಂದ 1985ನೇ ಇಸವಿಯಲ್ಲಿ ನಮ್ಮ ನಾಡಿನ ಇಂಗ್ಲೀಷ್ ಪತ್ರಿಕೆಯೊಂದು ಒಂದು ಮಾತನ್ನು ಹೇಳುತ್ತದೆ. ಆ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕಾಗಿ ನಾನು ಓದುತ್ತೇನೆ.

"In the short the policy of the Union Government, no doubt, ensure that the prices paid for commodity may come down, but this strategy could have disastrous long term consequences for the country's agriculture sector."

ಆದ್ದರಿಂದ ಬೆಲೆಯು ಜಾಸ್ತಿಯಾಯಿತೆಂದು ದಿಢೀರನೆ ಹೊರದೇಶದಿಂದ ತರಿಸುವುದು ಸರಿಯಲ್ಲ. ಈರುಳ್ಳಿಯ ಬೆಲೆ 50 ರೂಪಾಯಿಗಳು ಆಗಲಿ ಅಂಬಾಸಿಡರ್ ಕಾರಿನ ಬೆಲೆ 26 ಸಾವಿರ ರೂಪಾಯಿಗಳು ಇದ್ದದ್ದು 5 ಲಕ್ಷ ರೂಪಾಯಿಗಳಾದರೆ, ಈರುಳ್ಳಿಯ ಬೆಲೆ ಏತಕ್ಕಾಗಿ ಹೆಚ್ಚು ಆಗಬಾರದು? ರಾಗಿ, ಸಿಲ್ಕ್, ಟೊಮೊಟೋ ಬೆಲೆ ಏತಕ್ಕಾಗಿ ಹೆಚ್ಚಾಗಬಾರದು? 2 ರೂಪಾಯಿಗಳಿಗೆ ಒಂದು ಗಜ ಬಟ್ಟೆ ಇದ್ದದ್ದು 200 ರೂಪಾಯಿಗಳಿಗೆ ಒಂದು ಗಜ ಬಟ್ಟೆಯ ಧಾರಣೆಯಾಗಿದೆ. ಈ ದೇಶದಲ್ಲಿ ಇದರ ಬಗ್ಗೆ ಯಾರೂ ಕೇಳದವರಿಲ್ಲವೇ? ಅದಕ್ಕಾಗಿ ನಾನು ಹೇಳುತ್ತಿರುವುದು, ಬೆಲೆಯನ್ನು ಕಡಿಮೆ ಮಾಡಬೇಕೆಂಬ ದೃಷ್ಟಿಯಿಂದ ಹೊರಗಡೆಯಿಂದ ಆಮದು ಮಾಡಿಕೊಳ್ಳುವಂತಹದ್ದು ಕುಂಟು ನೆಪವಾಗಿದೆ; ಅದು ಸರಿಯಾದ ನೆಪವಲ್ಲ. ಆದುದರಿಂದ ಸಂಪೂರ್ಣವಾಗಿ ಉದಾರೀಕರಣ ಅಥವಾ ಈ ಒಂದು ಆಮದು ನೀತಿಯನ್ನು ವಿರೋಧ ಮಾಡುವುದಕ್ಕೆ ಸಾಧ್ಯತೆ ಇಲ್ಲದೇ ಇದ್ದರೂ ಕೂಡ ನನ್ನ ಪ್ರಾರ್ಥನೆ ಏನೆಂದರೆ, ಇದರ ಬಗ್ಗೆ ನಾನು ಅದರ ಇಡೀ ವಾದವನ್ನು ಕೇಳಿದ್ದೇನೆ. 1991ರ ಈಚೆಗೆ ತಂದಂತಹ ಉದಾರೀಕರಣದ ಪದ್ಧತಿಯಿಂದಾಗಿ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗುತ್ತಿದೆ. ಅವತ್ತಿನ ಪರಿಸ್ಥಿತಿ, ಅವತ್ತಿನ ಆರ್ಥಿಕ ದುಸ್ಥಿತಿ ಬಹುಶಃ ಆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಅವರಿಗೆ ಪ್ರೇರಣೆಯಾಗಿರಬಹುದು. ನಾನು ಅದರ ಬಗ್ಗೆ ಅನಲೈಸ್ ಮಾಡುವುದಕ್ಕೆ ಹೋಗುವುದಿಲ್ಲ. ಇದಾದನಂತರ 1991 ನೇ ಇಸವಿಯಿಂದ ಒಂದಲ್ಲ ನಾಲ್ಕಾರು ಸರ್ಕಾರಗಳು ಅಧಿಕಾರಕ್ಕೆ ಬಂದು ಹೋಗಿವೆ, ನಾಲ್ಕಾರು ಜನ ಪ್ರಧಾನಮಂತ್ರಿಗಳಾಗಿ ಬಂದು ಹೋಗಿದ್ದಾರೆ. ಇವತ್ತು ಆಮದನ್ನು ವಿರೋಧಿಸುವುದಕ್ಕೆ ಹಡಗನ್ನು ವಿರೋಧಿಸುವುದಕ್ಕೆ ಹೋಗಿದ್ದಂತಹ ಸನ್ಮಾನ್ಯರು ಅವತ್ತು ಈ ರಾಷ್ಟ್ರಕ್ಕೆ ಪ್ರಧಾನಮಂತ್ರಿಯಾಗಿ ಕುಳಿತಿದ್ದರು. ಮಾನ್ಯ ಸಿಂಧ್ಯಾರವರೆ, ಇವತ್ತು ಆಮದು ಅನಿಷ್ಟದ ಹೆಚ್ಚಳವನ್ನು ಹೊಂದಿದಂತಹ ಹಡಗನ್ನು ಮಂಗಳೂರಿನಲ್ಲಿ ತಡೆಯುವುದಕ್ಕೆ ಹೋಗಿದ್ದಾರೆ, ಅವರು ಈ ರಾಷ್ಟ್ರದ ಪ್ರಧಾನಮಂತ್ರಿಯಾಗಿದ್ದರು. ನಾನು ಅವರ ಹೆಸರನ್ನು ಪ್ರಸ್ತಾಪ ಮಾಡುತ್ತಿಲ್ಲ. ನಾನು ಉದಾಹರಣೆಯನ್ನು ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ವೈ.ಕೆ. ರಾಮಯ್ಯನವರೆ, ನಿಮ್ಮ ಸಿಟ್ಟನ್ನು ಸೇಡನ್ನು ತೀರಿಸಿಕೊಳ್ಳುವುದರಿಂದ ನಿಮಗೇನು ಉಪಯೋಗವಾಗುವುದಿಲ್ಲ. ಇದು ಚರಿತ್ರೆಯಲ್ಲಿ ಬರೆದಿರುವಂತಹ ಅಂಶವಾಗಿದೆ. ನಮಗೆ ಅದು ಲಘುವಾಗಿ ಕಾಣಬಹುದು, ಆದರೆ ಚರಿತ್ರೆಯಲ್ಲಿ ಕರ್ನಾಟಕದವರು ಒಬ್ಬರು ಪ್ರಧಾನ ಮಂತ್ರಿಗಳಾಗಿದ್ದರು ಎಂಬುದನ್ನು ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ, ಅದನ್ನು ಯಾರೂ ತೆಗೆದು ಹಾಕುವುದಕ್ಕಾಗುವುದಿಲ್ಲ. ಅದರಿಂದಾಗಿ ಇದರ ಮೂಲಕವಾಗಿ ತಮ್ಮ ಸಿಟ್ಟು ಶಮನವಾಗುತ್ತದೆ ಎನ್ನುವುದಾದರೆ ನಾನೇನು ಅಡ್ಡಿಪಡಿಸುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ :— ನಾನು ಉದಾಹರಣೆಯನ್ನು ಕೊಡುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಬೇಕಾದರೆ ಬೇರೆ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ತಾವು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವ್‌ರವರು ಈಗೆಲ್ಲಿದ್ದಾರೆಂಬುದನ್ನು ಉದಾಹರಣೆಯಾಗಿ ತೆಗೆದುಕೊಳ್ಳುವುದಕ್ಕೆ ತಯಾರಿಲ್ಲ. ಆದರೆ ಸರ್ಕಾರದವರು ಒಬ್ಬರು ಮಾಜೀ ಪ್ರಧಾನಮಂತ್ರಿಯಾಗಿರುವುದನ್ನು ಮಾತ್ರ ಉದಾಹರಣೆಯಾಗಿ ತೆಗೆದುಕೊಳ್ಳುತ್ತೀರಿ ಇದರಲ್ಲಿ ನನ್ನದೇನೂ ತಕರಾರಿಲ್ಲ.

ಶ್ರೀ ವೈ.ಕೆ. ರಾಮಯ್ಯ :— 1991ನೇ ಇಸವಿಯಿಂದ ಅನೇಕ ಸರ್ಕಾರಗಳು ಅಧಿಕಾರಕ್ಕೆ ಬಂದಿವೆ, ಇದರ ಬಗ್ಗೆ ನಾನು ಕೇಳುವುದೇನೆಂದರೆ, 1991ರಲ್ಲಿ ತಂದಂತಹ ಉದಾರೀಕರಣ ಒಂದನ್ನೇ ಕೃಷಿ ಉತ್ಪನ್ನಗಳ ವಿಲ್ ಇಳಿದು ಹೋಗುವುದಕ್ಕೆ ಕಾರಣವೆಂದು ಅವರಿಗೆ ಅನ್ನಿಸಿದರೆ ಈ ಉದಾರೀಕರಣದ ನೀತಿಗೆ ಏತಕ್ಕಾಗಿ ಫುಲ್‌ಸ್ಟಾಪ್‌ನ್ನು ಹಾಕಬಾರದಾಗಿತ್ತು? ಇದಕ್ಕೆ ಯಾರು ಅಡ್ಡಿ ತಂದಿದ್ದರು? ಇದು ನಮ್ಮೆಲ್ಲರಿಗೂ ಗೊತ್ತಿರುವಂತಹ ವಿಷಯವಾಗಿದೆ. ನಾನು ಇಲ್ಲಿ ಯಾರ ಬಗ್ಗೆ ಕೂಡ ಅಪಮಾದ ಮಾಡಬೇಕೆಂದಾಗಲಿ, ಯಾರನ್ನೋ ದೂರಬೇಕೆಂಬುದಾಗಲೀ ನನ್ನ ದೃಷ್ಟಿಯಲ್ಲ. 1991 ರಿಂದೀಚೆಗೆ ಬಹುತೇಕ ಕಾಂಗ್ರೆಸೇತರ ಸರ್ಕಾರಗಳೇ ಅಧಿಕಾರಕ್ಕೆ ಬಂದಿವೆ ಏತಕ್ಕಾಗಿ ಈ ಉದಾರೀಕರಣದ ನೀತಿಯನ್ನು ಇವರು ತೆಗೆಯಲಿಲ್ಲ? ಇದನ್ನು ಏತಕ್ಕಾಗಿ ನಿಲ್ಲಿಸಲಿಲ್ಲ? "ಎಂದೋ ಮನು ಬರೆದಿಟ್ಟಿದ್ದು ನಮಗೆ ಕಟ್ಟೇನು, ಎಂದೋ ಮನು ಬರೆದಿಟ್ಟಿದ್ದು, ನಮಗೆ ಕಟ್ಟೇನು, ಎಂದೋ ಮನು ಬರೆಸಿಟ್ಟಿದ್ದು ನಮಗೆ ಕಟ್ಟೇನು, ಪಂಚಮರ ಶಿಶುವೊಂದು ಕೆರೆಯಲ್ಲಿ ಮುಳುಗುತ್ತದೆ, ದಡದಲ್ಲಿ ಮೀಯುತ್ತಿರುವ ನಾನು ಬ್ರಹ್ಮಹತ್ಯೆ ಆಗಿ ಹೋಗುವುದೆಂದು ಸುಮ್ಮನಿದ್ದರೆ ಅದು ಧರ್ಮಸಮ್ಮತವೇನೋ, ಮನು ಇದನ್ನು ಹೇಳಲಾರನು ಅಯ್ಯೊಯ್ಯೋ, ಹೇಳಿದ್ದರೆ ಆ ಶಾಸ್ತ್ರವನ್ನು ಸುತ್ತಿ ಎದೆಯ ಧೈರ್ಯವನ್ನು ಮಾಡಿ ಬಿಸುಟ್ಟು ಹಾಕಿ" ಮನು ಮನ್‌ಮೋಹನ್‌ಸಿಂಗ್ ತಂದಿದ್ದರೆ, ನರಸಿಂಹರಾಯರು ತಂದಿದ್ದರೆ, ಕಾಂಗ್ರೆಸ್‌ನವರು, ಕಮ್ಯುನಿಸ್ಟ್ ನವರು ತಂದಿದ್ದಾರೆಂದು ಹೇಳಿಕೊಂಡು ಉಪಖ್ಯಾನ ಉಪ್ಕಾನ ಮಾಡುವುದರ ಬದಲು ನೀವು ಈ "ಶಾಸ್ತ್ರವನ್ನು ಸೇರಿ ಎದೆಯ ಧೈರ್ಯವ ಮಾಡಿ ಬಿಸುಟ್ಟು ಹಾಕಿ" ಏಕೆ ಹಾಗೆ ಮಾಡಲಿಲ್ಲ? ಅದಕ್ಕಾಗಿ ನಾನು ಹೇಳುತ್ತಿರುವುದು, ಯಾವುದೇ ಒಂದು ಪರಿಸ್ಥಿತಿಯನ್ನು ಆಡಳಿತದಲ್ಲಿ ಸೃಷ್ಟಿ ಮಾಡುವುದು ಅತೀ ಸುಲಭ, ಯಾವುದೇ ಒಂದು ಸವಲತ್ತುಗಳನ್ನು ಸಾಮಾನ್ಯ ಜನರಿಗೆ, ಆಡಳಿತದಲ್ಲಿ ಕೊಡುವುದು ಸುಲಭ, ಅದನ್ನು ಬದಲಾವಣೆ ಮಾಡುವುದು ಬಹಳ ಕಷ್ಟ. ಅದನ್ನು ನಾನು ನಮ್ಮ ಸ್ನೇಹಿತರಿಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದರಿಂದ ಇದು 1991 ನೇ ಇಸವಿಯಲ್ಲಿ ಮಾಡಿರುವುದೆಂದು ಹೇಳಿಕೊಂಡು ಹೋಗುವುದು ಸರಿಯಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು ಹೇಳಿದ ಪ್ರಕಾರ ಮುಕ್ತವಾಗಿ ಮಸ್ತುಷ್ಟಿತಿ ಏನಿದೆ, ಪಕ್ಷಾತೀತವಾಗಿ ಯಾವುದರಿಂದ ಬೆಳೆಗಳ ಉತ್ಪನ್ನ ಕಡಿಮೆಯಾಗಿದೆ, ಇದನ್ನು ನಿವಾರಣೆ ಮಾಡುವುದಕ್ಕೆ ನಾವು ಏನು ಮಾಡಬೇಕೆನ್ನುವುದರ ಬಗ್ಗೆ ನಾವು ಚಿಂತನೆ ಮಾಡಬೇಕೇ ಹೊರತು, ನಾನು ಅದನ್ನು ಹೇಳುವುದಕ್ಕೋಸ್ಕರ ಹೇಳಿರುವುದು, ನಾನು ಯಾರನ್ನೂ ದೂರುವುದಕ್ಕೋಸ್ಕರ ಹೇಳಲಿಲ್ಲ.

ಅದನ್ನು ಉದಾಹರಣೆಗಾಗಿ ತೆಗೆದುಕೊಂಡು ಪ್ರಸ್ತಾಪ ಮಾಡಿದ್ದೇನೆಯೇ ಹೊರತು, ಯಾರನ್ನೂ ದೂರುವುದಕ್ಕೋಸ್ಕರವಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ತಾವು ಬೇರೆ ಉದಾಹರಣೆಯನ್ನು ತೆಗೆದುಕೊಳ್ಳಬಹುದಾಗಿತ್ತು.

ಶ್ರೀ ವೈ.ಕೆ. ರಾಮಯ್ಯ :—ತಾವು ಹೇಳಿರುವುದನ್ನು ತೆಗೆದುಕೊಳ್ಳುವುದಕ್ಕಾಗುತ್ತದೆಯೇ? ನನಗೆ ಬೇಕಾಗಿರುವುದನ್ನು ನಾನು ತೆಗೆದುಕೊಳ್ಳುತ್ತೇನೆ. ಈ ಬೆಲೆಯ ಏರಿಳಿತಕ್ಕೆ ಮತ್ತೊಂದು ಕಾರಣವೇನೆಂದರೆ, ಹಣದುಬ್ಬರವೂ ಕೂಡ ಕಾರಣವಾಗಿದೆ. ಇದರಿಂದಲೂ ಕೂಡ ಬೆಲೆ ಕಡಿಮೆಯಾಗುವುದು, ಜಾಸ್ತಿಯಾಗುವಂತಹ ಪರಿಸ್ಥಿತಿ ನಮಗೆ ಗೋಚರಿಸುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ವೈ.ಕೆ. ರಾಮಯ್ಯನವರೆ, ನಾನು ಏತಕ್ಕಾಗಿ ಬೇರೆ ಉದಾಹರಣೆಯನ್ನು ತೆಗೆದುಕೊಳ್ಳಿ ಎಂದು ಹೇಳಿದೆನೆಂದರೆ, ನಿಮಗೆ ಗೊತ್ತಿರುವಹಾಗೆ, ಪಾಲಿಟಿಕ್ಸ್‌ನಲ್ಲಿ ಈ ತರಹ there are no permanent enemies and permanent friends.ಅದಕ್ಕೇ ನಾನು ಹೇಳಿದ್ದು.

ಶ್ರೀ ವೈ.ಕೆ. ರಾಮಯ್ಯ :— ನಾನು ಮಾನ್ಯ ಸಿಂಧ್ಯರವರ ಸಲಹೆಯನ್ನು ಒಂದು ಸಲಕ್ಕಿಂತ ಹಲವಾರು ಸಲ ಒಪ್ಪಿಕೊಂಡಿದ್ದೇನೆ. ನೀನು ರಾಜಕೀಯದಲ್ಲಿ ಬಹಳ ದಡ್ಡ, ಬುದ್ಧಿವಂತ ಅಲ್ಲ ಎಂದು ಅವರು ಒಂದು ಮಾತನ್ನು ಹೇಳುತ್ತಾರೆ. ಅದನ್ನು ನಾನು ಒಪ್ಪಿಕೊಂಡಿದ್ದೇನೆ, ಅವರು ಒಂದು ಸಾರಿಯಲ್ಲ, ಹತ್ತಾರುಬಾರಿ ಬುದ್ಧಿವಾದವನ್ನು ಹೇಳಿದ್ದಾರೆ. ಆ ವಿಷಯ ಚರ್ಚೆಗೆ ಬೇಡ; ನಾನು ನಿನ್ನೆಯ ದಿವಸ ಹೇಳಿದಾಗ ಮಾನ್ಯ ಎಸ್.ಎಸ್ ಪಾಟೀಲ್‌ರವರು ಸಿಟ್ಟು ಮಾಡಿಕೊಂಡರು, ಒಬ್ಬೊಬ್ಬರಿಗೆ ಒಂದೊಂದು ಗುಣವಿರುತ್ತದೆ. ಮಾನವೀಯ ದೃಷ್ಟಿಯಿಂದ ತೆಗೆದುಕೊಂಡರೆ ಮಾನ್ಯ ಜೆ.ಹೆಚ್. ಪಟೇಲರು ಅಲ್ಲಿ ಬಹಳ ಎತ್ತರದಲ್ಲಿ ಕಾಣುತ್ತಾರೆ, ಸಂಯಮದ ದೃಷ್ಟಿಯನ್ನು ತೆಗೆದುಕೊಂಡಾಗ ಅವರು ಸೊನ್ನೆಗೆ ಬರುತ್ತಾರೆ. ಅದಕ್ಕಾಗಿ ನಾನು ಹೇಳುವುದಕ್ಕೆ ಹೊರಟ್ಟಿದ್ದೇನೆ. ನನ್ನ ಗುಣ ಈ ರೀತಿ ಇದೆ, ಅದಕ್ಕೇನು ಮಾಡುವುದಕ್ಕಾಗುತ್ತದೆ?

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ವೈ.ಕೆ. ರಾಮಯ್ಯನವರೆ, ನಿನ್ನೆ ದಿವಸ ತಾವು ಜೆ.ಹೆಚ್. ಪಟೇಲ್‌ರವರ ಬಗ್ಗೆ ಒಂದು ಮಾತನ್ನು ಹೇಳಿದ್ದೀರಲ್ಲಾ, ಆಗ ಛೇರ್ಮನ್‌ರವರು ಸದನದಲ್ಲಿ ಇರಲಿಲ್ಲ. ಆ ಕಂಪನ್ನು ತಾವು ಉಣಲಿಲ್ಲ, ಆಗ ಮಾನ್ಯ ಅರಗ ಜ್ಞಾನೇಂದ್ರರವರು ಸದನದಲ್ಲಿದ್ದರು, ಅವರನ್ನು ಬೇಕಾದರೆ ತಾವು ಕೇಳಬಹುದು. ಅವರು ಕೇಳಿದ ಒಂದು ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ರಸ್ತೆ ಸರಿಯಿಲ್ಲದಿದ್ದರೆ ಕುದುರೆಯನ್ನು ಹತ್ತಿಕೊಂಡು ಹೋಗಿ ಲೈಟ್ ಇಲ್ಲ ಅಂದರೆ ಲಾಟೀನು ಹಿಡಿದುಕೊಂಡು ಹೋಗಿ ಎಂದು ಹಾಸ್ಯವಾಗಿ ಮಾನ್ಯ ದಿ. ಜೆ.ಹೆಚ್. ಪಟೇಲರು ಹೇಳುತ್ತಿದ್ದರು ಎಂದು ನಿನ್ನೆ ಹೇಳಿದ್ದರು. ಆದರೆ ಅವರ ಮಾತು ಏನಿತ್ತು ಎಂಬುದರ ಬಗ್ಗೆ ಹೇಳಬೇಕಾಗುತ್ತದೆ. ಸರ್ವಜ್ಞನ ವಚನವನ್ನು ನಾವು ನೋಡಿದರೆ ಅದು ಬಹಳ ಕಿಟ್ಟಹಾಗೆ ಕಾಣುತ್ತದೆ. ಮಾನ್ಯ

ಎಸ್.ಎಸ್. ಪಟೇಲರು ಏನಪ್ಪ ಕೆಟ್ಟ ಶಬ್ದವನ್ನು ಈ ಸದನದಲ್ಲಿ ಹೇಳಿದರು, ಅದನ್ನು ಕಡತದಿಂದ ತೆಗೆಯಬೇಕೆನಿಸುತ್ತದೆ. "ಬರೆಯದೆನೆ ಓದುವವನ, ಬರಿಗಾಲಲ್ಲಿ ನಡೆಯುವವನ, ಕರೆಯದೆ ಹೋಗುವವನ ಕರೆದು ಕೆರವನ್ನು ತೆಗೆದುಕೊಂಡು ಹೊಡಿ ಎಂದ ಸರ್ವಜ್ಞ" ಎಂದು ಹೇಳಿದ್ದ. ಆದರೆ ಹಿಂದಿನ ಭಾವನೆ ಏನಿದೆ, ಅದನ್ನು ನೋಡಬೇಕೇ ವಿನಃ ಮುಂದಿನ ಶಬ್ದವನ್ನು ನೋಡಬಾರದು. ಹಾಗೆ ಆ ದಿವಸ ಲಾಟೀನು ಹಿಡಿದುಕೊಂಡು ಹೋಗು, ಕುದುರೆಯನ್ನು ಹಿಡಿದುಕೊಂಡು ಹೋಗು ಎಂದು ಮಾನ್ಯ ದಿ. ಪಟೇಲರು ಹೇಳಿದಾಗ ಅವತ್ತು ತಾವು ಸದನದಲ್ಲಿ ಆ ಸವಿಯನ್ನು ಉಣಲಿಕ್ಕೆ ತಾವು ಇರಲಿಲ್ಲ. ಆ ಆನಂದ, ಸಂತೋಷ, ಆ ದಿನ ಇಡೀ ಸದನವೇ ನಗೆಗಡಲಿನಲ್ಲಿ ಮುಳುಗಿತ್ತು. ಆಮೇಲೆ ಅಧ್ಯಕ್ಷರಿಗೆ ಒಂದು ಕತೆಯನ್ನು ಹೇಳಿದ್ದರು, ಆ ಕತೆಯನ್ನು ಹೇಳಿದರೆ ಬಹಳ ನಗು ಬರುತ್ತದೆ. ಅದನ್ನು ಹೇಳುವುದು ಬೇಡ.

5.50 ಪಿ.ಎಂ.

ಶ್ರೀ ಬಿ.ಎನ್. ಬಚ್ಚೇಗೌಡ :— ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಯ್ಯನವರು ಆ ಅಕೇಷನ್‌ನಲ್ಲಿ ಅದನ್ನು ಕ್ಲಾರಿಫೈ ಮಾಡೋಣವೆಂದು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ವೈ.ಕೆ. ರಾಮಯ್ಯ :— ಥ್ಯಾಂಕ್ಸ್.

ಶ್ರೀ ಬಿ.ಎನ್. ಬಚ್ಚೇಗೌಡ :— ಡೌಟ್ ಕ್ಲಾರಿಫೈ ಆಗಬೇಕು. ಅದರ ಬಗ್ಗೆ ಒಂದು ಸ್ಟ್ಯಾಂಡ್ ಇರಬೇಕು.

ಶ್ರೀ ವೈ.ಕೆ. ರಾಮಯ್ಯ :— ನಾನು ಹೇಳಿದ್ದೇನೆ. ಈ ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಮತ್ತೊಂದು ಪ್ರಮುಖವಾದ ಕಾರಣ, ಹಣದುಬ್ಬರ. ಎಲ್ಲಿಯವರೆಗೆ ನಾವು ಸಾಮಾನ್ಯ ಜನರ ಕೊಂಡುಕೊಳ್ಳುವ ಶಕ್ತಿಯನ್ನು ವರ್ಧನೆಮಾಡುವ ಕಡೆಗೆ ಗಮನವನ್ನು ಹರಿಸುವುದಿಲ್ಲವೋ ಅಲ್ಲಿಯವರೆಗೆ ಇದು ಇದ್ದೇ ಇರುತ್ತದೆ. ಇವತ್ತು ಈ ದೇಶದಲ್ಲಿ ಕೃಷಿ ಉತ್ಪನ್ನ ಸಾಕಷ್ಟು ಆಗಿದೆ ಅಂದರೆ ಅದರ ಅರ್ಥ ಎಲ್ಲರೂ ಸಾಕಷ್ಟು ಹೊಟ್ಟೆತುಂಬ ಊಟ ಮಾಡುತ್ತಿದ್ದಾರೆಂದು ಅಲ್ಲ. ಒಂದು ಕಡೆ ಪಂಜಾಬಿನಲ್ಲಿ ಗೋದಿ ರಾಶಿ ರಾಶಿ ಬಿದ್ದಿದ್ದರೆ, ಬೆಂಗಳೂರು ಬಸ್ ಸ್ಟಾಂಡಿನಲ್ಲಿ ಹೊಟ್ಟೆಗಿಲ್ಲದೆ ಬರಿಹೊಟ್ಟೆಯಲ್ಲಿ ಮಲಗಿರುವವರು ಇದ್ದಾರೆ. ಸಂಪತ್ತಿನ ಸೃಷ್ಟಿ ಒಂದು ಕಡೆಯಾದರೆ ಅದು ಸಮಾನವಾಗಿ ಹಂಚಿಕೆಯಾಗದಿರುವ ದುಸ್ಥಿತಿಯನ್ನು ಈ ದೇಶದಲ್ಲಿ ನಾವು ಕಾಣುತ್ತಿದ್ದೇವೆ. ಇಂಫ್ಲೇಷನ್ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. ಇಬ್ಬರು ಅಣ್ಣತಮ್ಮಂದಿರು ಇದ್ದರಂತೆ. ಒಬ್ಬ ಮಹಾ ಕುಡುಕ, ಕುಡಿದು ಕುಡಿದೂ ಆಸ್ತಿಯನ್ನೆಲ್ಲ ಕಳೆದುಬಿಟ್ಟನಂತೆ. ಕುಡಿದ ಖಾಲಿ ಬಾಟಲಿಗಳನ್ನು ಒಂದು ಕಡೆ ರಾಶಿ ಹಾಕಿಬಿಟ್ಟ. ಇನ್ನೊಬ್ಬ ಅಪ್ಪ ಕೊಟ್ಟ ಅರ್ಧ ಎಕರೆ ಭೂಮಿಯನ್ನು ಇಟ್ಟುಕೊಂಡು ನಾನು ಏನೂ ಆಸ್ತಿಯನ್ನು ಮಾರಿಲ್ಲ, ಎಲ್ಲ ಉಳಿಸಿಕೊಂಡಿದ್ದೇನೆಂದು ಹೇಳುತ್ತಿದ್ದ. ಇಂಫ್ಲೇಷನ್ ಬಂದಾಗ ಖಾಲಿ ಬಾಟಲಿಗಳ ಧಾರಣೆ ಅಪ್ಪ ಕೊಟ್ಟ ಆಸ್ತಿಗಿಂತ

ಜಾಸ್ತಿಯಾಯಿತು. ಅದೇ ರೀತಿಯಾಗಿ ಈ ಕೃಷಿ ಉತ್ಪನ್ನಗಳ ಬೆಲೆ ಕುಸಿಯುವುದಕ್ಕೆ ವಿದೇಶಗಳಿಗೆ ಇಂಪ್ಲೇಷನ್ ಕೂಡ ಒಂದು ಕಾರಣ. ಈ ದೇಶದಲ್ಲಿ ಸಾಮಾನ್ಯ ಜನರು ಕೊಂಡುಕೊಳ್ಳುವ ಶಕ್ತಿಯನ್ನು ಹೆಚ್ಚು ಮಾಡದಿರುವುದರಿಂದ ಬೆಳೆಗಳ ಉತ್ಪನ್ನದ ಬೆಲೆ ಕಡಿಮೆಯಾಗುತ್ತಿದೆಯೆಂದು ಹೇಳುವುದಕ್ಕೆ ನಾನು ಇಚ್ಛಿಪಡುತ್ತೇನೆ. ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗುವುದಕ್ಕೆ ಸಂವೃದ್ಧಿಯಾದ ಉತ್ಪಾದನೆ, ಕಡಿಮೆಯಾದ ಬೇಡಿಕೆ, ಕೊಂಡುಕೊಳ್ಳುವುದಕ್ಕೆ ಸಂವೃದ್ಧಿಯಾದ ಉತ್ಪಾದನೆ, ಕಡಿಮೆಯಾದ ಬೇಡಿಕೆ, ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲದ ಜನ, ಆನಾವಶ್ಯಕವಾದ ಆಮದು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸ್ಪರ್ಧೆ ಮಾಡುವುದಕ್ಕೆ ಸಾಧ್ಯತೆ ಇಲ್ಲದಿರುವ ಗುಣಮಟ್ಟದ ವಸ್ತುಗಳ ಉತ್ಪಾದನೆ, ಇದು ಎಲ್ಲದಕ್ಕಿಂತ ಹೆಚ್ಚಾಗಿ ಅವಶ್ಯಕತೆ ಇಲ್ಲದಿದ್ದರೂ ಕೂಡ ಆಮದನ್ನು ಮಾಡುವಂತಹ ಕೆಟ್ಟ ನೀತಿ, ಇವು ನಾಡಿನಲ್ಲಿ, ಕೃಷಿ ಉತ್ಪನ್ನಗಳ ಬೆಲೆ ಕುಸಿತಕ್ಕೆ ಸ್ಪಷ್ಟವಾದಂತಹ ನಿರ್ದಿಷ್ಟವಾದಂತಹ ಕಾರಣಗಳು. ಈ ಕಾರಣಗಳನ್ನು ಹೇಳುವುದರ ಜೊತೆಗೆ ಪರಿಹಾರವನ್ನು ಏನು ಮಾಡಬೇಕೆಂಬುದರ ಬಗ್ಗೆ ಎರಡು ಮಾತುಗಳನ್ನು ಕೇಳುವುದಕ್ಕೆ ನಾನು ತಮ್ಮ ಅಪ್ಪಣೆಯನ್ನು ಕೋರುತ್ತೇನೆ. ಡಬ್ಲ್ಯೂಟಿಒ. ಯಿಂದ ಹೊರಗಡೆ ಬರುವುದಕ್ಕೆ ಆಗುತ್ತದೆಯೋ, ಆಗುವುದಿಲ್ಲವೋ ಎನ್ನುವಂತಹ ವಿಚಾರವನ್ನು ಚರ್ಚೆಗೆ ಬಿಡುತ್ತೇನೆ. ಕೊನೆಯ ಪಕ್ಷ delink this agricultural products from the import. ಇಷ್ಟನ್ನಾದರೂ ಮಾಡಬಹುದು. ಹಿಂದೆ ನೆಗೆಟಿವ್ ಲಿಸ್ಟ್ ಒಂದು ಇತ್ತು. ಸುಮ್ಮನೆ ಅವರ ಮೇಲೆ ದೂರಿಕೊಂಡು ಭಾಷಣ ಮಾಡುವುದಕ್ಕೆ ನನಗೆ ಇಷ್ಟವಿಲ್ಲ. ಅಲ್ಲಿ ರಾಷ್ಟ್ರಮಟ್ಟದಲ್ಲಿ ಸಹ ಸಮಸ್ಯೆಗಳು ಇರುತ್ತವೆ. ಆದ್ದರಿಂದ ನನ್ನ ಪ್ರಕಾರ ಆಮದು ಅನಿವಾರ್ಯ. ಉದಾರೀಕರಣ ಅನಿವಾರ್ಯ. ಆದರೆ ನಾನು ಇಷ್ಟು ಮಾತ್ರ ಪ್ರಾರ್ಥನೆ ಮಾಡಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ, ಕೃಷಿ ಉತ್ಪನ್ನಗಳನ್ನು ಆಮದು ಲಿಸ್ಟ್‌ನಿಂದ ಹೊರತುಪಡಿಸುವ ಮೂಲಕ ರಾಷ್ಟ್ರದಲ್ಲಿ ಕೃಷಿ ಉತ್ಪನ್ನಗಳ ಪ್ರಗತಿಗೆ ಅವರು ನಾಂದಿಯನ್ನು ಹಾಡಲಿಯೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇನ್ನು ಎರಡನೆಯದಾಗಿ, ನಮ್ಮಲ್ಲಿ ಸಾಕಷ್ಟು ಭತ್ತ, ರಾಗಿ ಇದ್ದರೂ, ಎಷ್ಟೇ ಆಹಾರ ಪದಾರ್ಥಗಳು ಇದ್ದರೂ ಕೂಡ ಯಾವ ಜನರು ಹಸಿವಿನಿಂದ ಇದ್ದಾರೆ ಅಂತಹ ಜನಗಳಿಗೆ ಆಹಾರ ವಸ್ತುಗಳನ್ನು ಕೊಂಡುಕೊಳ್ಳುವ ಶಕ್ತಿಯನ್ನು ವೃದ್ಧಿ ಮಾಡುವ ಕಾರ್ಯಕ್ರಮವನ್ನು ನಾವು ಆಳುವ ಪಕ್ಷದವರು, ಆಳುವಂತಹ ಸರ್ಕಾರದವರು ಹಮ್ಮಿಕೊಳ್ಳಬೇಕಾಗುತ್ತದೆಂದು ಎರಡನೆಯ ಪರಿಹಾರವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದರ ಜೊತೆಗೆ ಸಹಜವಾಗಿ ಪ್ರತಿ ವರ್ಷ ಮಾನ್ಯ ಭೈರೇಗೌಡರು ರೈತರಿಗೆ ಒಂದು ಕಿಲುಬು ಕಾಸು ಕೊಟ್ಟಿಲ್ಲವೆಂದು ಹೇಳುತ್ತಾರೆ. ನಮಗೆಲ್ಲಾ ಪೂರಕ ಬಜೆಟ್ ಪ್ರತಿಯನ್ನು ಕೊಟ್ಟಿದ್ದಾರೆ. ನಾನು ರಾತ್ರಿ ಆ ಬಜೆಟ್ ಪ್ರತಿಯನ್ನು ಓದಿದೆ. ತಾವು ಓದಿದ್ದರೋ ಅಥವಾ ಇಲ್ಲವೋ ಅದು ನನಗೆ ಗೊತ್ತಿಲ್ಲ. ಸಪ್ಲಿಮೆಂಟರಿ ಬಜೆಟ್ ಇದು ಯಾವ ಕೊಡುಗೆಯೆಂದು ಹೇಳಿದರೆ ಅದು ಕಾಂಟ್ರವರ್ಸಿಯಾಗುತ್ತದೆ. ಆದ್ದರಿಂದ ನಾನು ಹೇಳುವುದಿಲ್ಲ. ಈ ಪೂರಕ ಬಜೆಟ್‌ನಲ್ಲಿ

ಕೊಟ್ಟಿರುವ ಕೋಟ್ಯಾಂತರ ರೂಪಾಯಿಗಳ ಹಣವನ್ನು ರೈತರ ಏಳಿಗೆಗೆ ಕೊಟ್ಟಿದ್ದಾರೆ. ಆದರೆ ನನ್ನ ಪ್ರಕಾರ ಅದು ಏನೇನೂ ಅಲ್ಲ, ಅದು ನೆಗ್ಲಿಜಬಲ್. ನನ್ನ ಸ್ನೇಹಿತರ ಜೊತೆ ಸೇರಿಕೊಳ್ಳುವುದಕ್ಕೆ ಪ್ರಯತ್ನ ಮಾಡಿ, ಬೇರೆ ಕ್ಷೇತ್ರಗಳಿಗೆ ಕೊಡುವ ತರಹ ಸಾಕಷ್ಟು ಹಣವನ್ನು ಈ ಕೃಷಿ ಕ್ಷೇತ್ರಕ್ಕೂ ಕೊಟ್ಟು ಅವರಿಗೆ ಸಹಾಯವನ್ನು ಮಾಡಬೇಕು.

ಶ್ರೀ ಎಸ್.ಎಸ್. ಪಾಟೀಲ್ :— ಮಾನ್ಯ ರಾಮಯ್ಯನವರೇ, ಒಂದು ನಿಮಿಷ ತಾವು ಈಲ್ಡ್ ಆಗಬೇಕು. ತಾವೇನು ಪೂರಕ ಬಜೆಟ್‌ನಲ್ಲಿ ಕೊಟ್ಟಿರುವ ಬಗ್ಗೆ ಹೇಳಿದ್ದೀರಿ, ಇವರು ರೈತರಿಗೆ ಏನೂ ಕೊಟ್ಟಿಲ್ಲ. ರೈತರಿಗೆ ಕೊಟ್ಟಿರುವ ಇನ್ಸುರೆನ್ಸ್ ಹಣವನ್ನು ಕೇಂದ್ರ ಸರ್ಕಾರದಿಂದ ಬಂದಿರುವ ಹಣವನ್ನು ಇವತ್ತಿನವರೆಗೆ ಬ್ಯಾಂಕುಗಳಿಗೆ ತುಂಬಿಲ್ಲ. ನಾನು ಹತ್ತು ಸಲ ಹೇಳಿದ್ದೇನೆ. ಇವತ್ತು ತುಂಬಿಸಿದ್ದಾರೋ ಏನೋ ಮಾನ್ಯ ಕೃಷಿ ಮಂತ್ರಿಗಳನ್ನು ಕೇಳಿ?

ಶ್ರೀ ಟಿ.ಬಿ. ಜಯಚಂದ್ರ (ಕೃಷಿ ಸಚಿವರು) :— ನಮ್ಮ ಪಾಲಿನ ಹಣ ಮೂರನೆಯ ಒಂದು ಭಾಗ ಏನಿದೆ ಅದನ್ನು ಬಿಡುಗಡೆ ಮಾಡಿದ್ದೇನೆ. ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದೆ. ನಾಳೆ ಅದರ ಬಗ್ಗೆ ವಿವರ ಕೊಡುತ್ತೇನೆ. ತಮಗೆ ಯಾವ್ಯಾವ ಜಿಲ್ಲೆಯವರು ಬೇಕು ಕೇಳಿ.

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ಅಧ್ಯಕ್ಷರೆ, ಬೆಂಬಲ ಬೆಲೆಯನ್ನು ಕೊಡುವುದರ ಜೊತೆಗೆ ಈ ದೇಶದಲ್ಲಿ ಬೆಲೆ ಏರಿಳಿತಕ್ಕೆ ಕಾರಣ ಏನೆಂಬುದನ್ನು ವಿಚಾರ ಮಾಡಬೇಕು. ಒಂದು ಸಾರಿ ಉತ್ಪಾದನೆ ಜಾಸ್ತಿಯಾಗುತ್ತದೆ, ಒಂದು ಸಾರಿ ಉತ್ಪಾದನೆ ಕಡಿಮೆಯಾಗುತ್ತದೆ. ಆದಕ್ಕಾಗಿ ನೀವು ಜಾರಿಗೆ ತಂದಿರುವ ಉಗ್ರಾಣ ಪದ್ಧತಿ ಅದನ್ನು ಬಲಪಡಿಸಬೇಕು. ಸಹಾಯಧನದ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿತ್ತು. ಮಹಾ ಮಂಡಳಿಯವರಿಗೆ ಕೃಷಿ ಮಂತ್ರಿಗಳು 18 ಲಕ್ಷ ರೂಪಾಯಿಗಳನ್ನು ನಾಳೆ ಕೊಡುತ್ತೇವೆಂದು ಹೇಳುತ್ತಿದ್ದರು. ಇಲ್ಲಿ ವಾದ ವಿವಾದಗಳಿಂದ ರೈತರ ಹೊಟ್ಟೆ ತುಂಬುವುದಿಲ್ಲ. ಅದಕ್ಕೋಸ್ಕರ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಉಗ್ರಾಣ ಪದ್ಧತಿಯನ್ನು ಬಲಪಡಿಸಿದರೆ, ಬೆಲೆ ಕುಸಿತವಾದಾಗ ಅದನ್ನು ಕೊಂಡುಕೊಂಡು ಉಗ್ರಾಣದಲ್ಲಿ ಸಂಗ್ರಹಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಮಾನ್ಯ ಶ್ರೀನಿವಾಸಗೌಡರು ನೂರು ಕೋಟಿಯೆಂದು ಹೇಳಿದರು, ಅದಕ್ಕಿಂತ ಹೆಚ್ಚು ಹಣವನ್ನು ಒದಗಿಸಿ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪನೆ ಮಾಡುವ ಮೂಲಕ ಅದು ತತ್‌ಕ್ಷಣ ಆಗಬೇಕು. ಆಟೋಮೆಟಿಕ್ ಆಗಿ ಕೆಲಸವಾಗಬೇಕು. ಅದು ಫೈನಾನ್ಸ್‌ಗೆ ಹೋಗಿ ಫೈನಾನ್ಸ್ ಸೆಕ್ರೆಟರಿ ಗೋಪಾಲರೆಡ್ಡಿಯವರು ರುಜು ಮಾಡುವುದು ಅದಕ್ಕೆ ಪುನಃ ಎಲ್‌ಓಸಿ ಕೊಡುವುದು; ಈ ತರಹ ಆಗುವುದು ಬೇಕಾಗಿಲ್ಲ. ಅದು ಯಾವಾಗಲೂ ರೆಡಿ ಇರಬೇಕು. ಬೆಲೆ ಕುಸಿದಾಗ ತಕ್ಷಣ ಇಂಟರ್‌ವಿನ್ ಮಾಡಿ ಪರ್ಚೇಸ್ ಮಾಡುವುದಕ್ಕೆ ಸರ್ಕಾರದವರು ವ್ಯವಸ್ಥೆ ಮಾಡಬೇಕು. ಉಗ್ರಾಣಗಳನ್ನು ಬಲಪಡಿಸಬೇಕು.

ಇದರ ಜೊತೆಗೆ ನಮಗೆಲ್ಲರಿಗೂ ನೋವು ಉಂಟುಮಾಡತಕ್ಕ ಸಂಗತಿ ಏನೆಂದರೆ ಹಣ್ಣು ಮತ್ತು ತರಕಾರಿ, ಪೆರಿಶಬಲ್ ಗೂಡ್ಸ್ ಅದನ್ನು ನೋಡುತ್ತಿದ್ದರೆ ಕಣ್ಣಿನಲ್ಲಿ ರಕ್ತ ಬರುತ್ತದೆ. ಟೊಮೊಟೋವನ್ನು ತಂದು ರಸ್ತೆಯಲ್ಲಿ ಚೆಲ್ಲುತ್ತಾರೆ. ಅದಕ್ಕಾಗಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ, you have made come attempt for establishing cold-starage, but you have not succeded so far inspite of best efforts. ಯಾವ ಹಣ್ಣು ತರಕಾರಿ ನಶಿಸಿ ಹೋಗುತ್ತವೆ, ಕೆಡುವಂತಹ ವಸ್ತುಗಳು, ಕೃಷಿ ಉತ್ಪನ್ನಗಳಿಗೆ ಅವುಗಳನ್ನು ಶೇಖರಿಸುವಂತಹ, ಅದಕ್ಕೆ ಬೇಕುದ ಶೀಥಲ ಕಟ್ಟಡಗಳು ಇರುವಂತಹ ಕಡೆಗಳಲ್ಲಿ ಅದನ್ನು ಬಲಪಡಿಸುವುದು, ಇಲ್ಲದಿರುವ ಕಡೆಗಳಲ್ಲಿ ಎಸ್ಟಾಬ್ಲಿಶ್ ಮಾಡುವುದಕ್ಕೆ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಎಲ್ಲಕ್ಕಿಂತ ಹೆಚ್ಚಾಗಿ, ಅದು ಯಾವುದೇ ದೇಶದಲ್ಲಿ ಏನೇನೋ ಇದೆಯೆಂದು ಮಾನ್ಯ ಭೈರೇಗೌಡರು ಹೇಳಿದರು. ಬೇರೆ ದೇಶಗಳಲ್ಲಿ ಕೃಷಿ ಉತ್ಪನ್ನಗಳಿಗೆ they have not fixed the ceiling price. They have fixed floor price. ಬಹುಶಃ ನನಗೆ ಗೊತ್ತಿರುವಹಾಗೆ ಹಿಮಾಚಲಪ್ರದೇಶದಲ್ಲಿ ಹಣ್ಣುಗಳಿಗೆ ಮಾಡಿರುವ ಒಂದೇ ಒಂದು ಪ್ರಯತ್ನವನ್ನು ಬಿಟ್ಟರೆ ಇಡೀ ಭಾರತದೇಶದಲ್ಲಿ ಯಾವ ರಾಜ್ಯ ಸರ್ಕಾರಗಳು ಯಾವ ಕೇಂದ್ರ ಸರ್ಕಾರದವರು ಇವತ್ತಿನವರೆಗೆ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಲೆಯನ್ನು ನಿಗದಿ ಮಾಡಿಲ್ಲ. ಶ್ರೀ ಮಲ್ಲಿಕ್ಕಾರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ಮಾಡಿದರು, ಅವರೊಂದು ವರದಿಯನ್ನು ಕೊಟ್ಟರು. ಆ ವರದಿ ವರದಿಯಾಗಿಯೇ ಉಳಿಯಿತು. ಇವತ್ತಿನವರೆಗೆ ಭಾರತದೇಶದಲ್ಲಿ ಕೃಷಿ ಉತ್ಪನ್ನಗಳಿಗೆ ಕನಿಷ್ಟ ಬೆಲೆಯನ್ನು ನಿಗದಿ ಮಾಡುವಂತಹ ಯಾವುದೇ ಪ್ರಾಮಾಣಿಕ ಪ್ರಯತ್ನವನ್ನು ಯಾವ ಸರ್ಕಾರವು ಮಾಡಲಿಲ್ಲ. Let alone ceiling price, you have not made an attempt to fix the floor price. ನಾನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎರಡೂ ಸರ್ಕಾರಗಳವರಿಗೆ ನಾನು ಈ ಸದನದ ಮೂಲಕ ಪ್ರಾರ್ಥನೆ ಮಾಡುತ್ತಿದ್ದೇನೆ, ಯಾವುದಾದರೂ ಒಂದು ಹಂತದಲ್ಲಿ ಈ ಕೆಲಸವನ್ನು ಮಾಡಬೇಕಾಗುತ್ತದೆ; ಬೆಲೆ ಕುಸಿತಕ್ಕೆ ಮತ್ತು ಏರಿಳಿತವನ್ನು ತಡೆಹಿಡಿಯಬೇಕಾದರೆ ಕನಿಷ್ಟ ಬೆಲೆಯನ್ನು ನಿಗದಿ ಮಾಡುವಂತಹ ಒಂದು ವ್ಯವಸ್ಥೆಯನ್ನು ಈ ದೇಶದಲ್ಲಿ ತರಬೇಕೆಂದು ಹೇಳುತ್ತೇನೆ. ಇದಕ್ಕೆ ಮತ್ತೊಂದು ಪ್ರಮುಖವಾದ ಕಾರಣವಿದೆ. ಅದು ಮಧ್ಯವರ್ತಿಗಳು. ಮಾನ್ಯ ಶ್ರೀನಿವಾಸಗೌಡರು ಹೇಳುತ್ತಿದ್ದರು ಟವಲ್ ಮರೆಯಲ್ಲಿ ಕೈ ಹಿಸುಕುತ್ತಾರೆಂದು, ಆ ಪದ್ಧತಿ ಇದೆ. ಆದ್ದರಿಂದ ಬೆಲೆ ಸ್ಥಿರೀಕರಣಗೊಳಿಸಬೇಕಾದರೆ ಅದನ್ನು ಉತ್ತಮಗೊಳಿಸಬೇಕಾದರೆ, ನಾವು ಮಾಡಬೇಕಾಗಿರುವ ಕೆಲಸವೆಂದರೆ ಮಾರ್ಕೆಟ್‌ಗಳಲ್ಲಿರುವಂತಹ ಮಧ್ಯವರ್ತಿಗಳನ್ನು ಕಿತ್ತುಹಾಕುವುದು. ಈ ಕೆಲಸವನ್ನು ಮಾಡಿದರೆ ಕೃಷಿ ಉತ್ಪನ್ನಗಳ ಬೆಲೆಯಲ್ಲಿ ಏರಿಳಿತವನ್ನು ತಡೆಗಟ್ಟುವುದಕ್ಕೆ ಸಾಧ್ಯವಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಈ ಬೆಲೆಯೇರಿಕೆ ಇಳಿಕೆಗೆ ನಮ್ಮ ಅಭಿವೃದ್ಧಿ ಅನಾವೃಷ್ಟಿ ಕೂಡ ಕಾರಣ. ಅತಿವೃಷ್ಟಿ

ಬಂದಾಗಲೂ ಕೂಡ ಬೆಳೆ ನಾಶವಾಗುತ್ತದೆ, ಅನಾವೃಷ್ಟಿ ಬಂದಾಗಲೂ ಕೂಡ ನಮ್ಮ ಬೆಳೆ ನಾಶವಾಗುತ್ತದೆ. ಆದ್ದರಿಂದ ಈ ಅತಿವೃಷ್ಟಿ ಅನಾವೃಷ್ಟಿಯನ್ನು ತಡೆದು ಈ ಒಂದು ಸಂದರ್ಭದಲ್ಲಿ ಕೃಷಿ ಬೆಳೆಯ ಬೆಳವಣಿಗೆ ಮತ್ತು ಕೃಷಿ ಬೆಲೆಯ ಸ್ಥಿರೀಕರಣ-ಇವೆರಡನ್ನು ಮಾಡುವುದಕ್ಕೆ ಸರ್ಕಾರ ಇದನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಇತ್ತೀಚೆಗೆ ಕೇಂದ್ರ ಸರ್ಕಾರದಲ್ಲಿ ಒಂದು ಆಜ್ಞೆ ಹೊರಟಿದೆ. They have banned the export of spun silk. I don't know why? ಆಮದು ಮಾಡಿಕೊಳ್ಳುವುದಕ್ಕೆ ಬಹಳ ಸಲೀಸು. ಇದು ಗುಣಮಟ್ಟ ಏನೂ ಇಲ್ಲ, ಎಲ್ಲರೂ ಲಬಲಬ ಹೊಡೆದುಕೊಂಡರು. ನೀವು ತಲೆಗೆ ಹಚ್ಚುವ ಬಣ್ಣದ ರೇಟನ್ನು ಅಂಗಡಿಯಲ್ಲಿ ಯಾರಾದರೂ ಕೇಳುತ್ತಾರಾ? ಅದೇ ನೀವು ಪಕ್ಕದ ತರಕಾರಿ ಅಂಗಡಿಗೆ ಹೋದರೆ ಚೌಕಾಸಿ. ಆ ಚೌಕಾಸಿ ಮಾಡುವುದನ್ನು ನೋಡುವುದಕ್ಕೆ ಆಗುವುದಿಲ್ಲ. ಟೂತ್ ಪೇಸ್ಟ್‌ಗೆ ಎಷ್ಟು ಬೆಲೆ ಎಂದು ಕೇಳುವುದಿಲ್ಲ, ತಲೆಗೆ ಹಾಕುವ ಬಣ್ಣಕ್ಕೆ ಬೆಲೆಯೆಷ್ಟು, ಹೇರ್ ರಿಮೂವರ್‌ಗೆ ಎಷ್ಟು ಬೆಲೆಯೆಂದು ಯಾರೂ ತಲೆಕೆಡಿಸಿಕೊಳ್ಳದೆ ಸುಮ್ಮನೆ ಖರೀದಿ ಮಾಡಿ ಬ್ಯಾಗಿನಲ್ಲಿ ಹಾಕಿಕೊಂಡು ಬರುತ್ತಾರೆ. ಆದ್ದರಿಂದ ಈ ದೇಶದಲ್ಲಿ ಆಮದಿಗೆ ಎಷ್ಟು ಆದ್ಯತೆ ಕೊಡುತ್ತೇವೆ, ರಫ್ತಿಗೆ ಅಷ್ಟು ಆದ್ಯತೆಯನ್ನು ಕೊಡುತ್ತಿಲ್ಲ. ಸ್ಪನ್‌ಸಿಲ್ಕ್‌ನ್ನು ಇವತ್ತು ರಫ್ತು ಮಾಡುವುದನ್ನು ನಿಲ್ಲಿಸಿದ್ದಾರೆ. ಅದನ್ನು ಸೇರಿಸುವ ಹಾಗೆ, ಇದನ್ನು ರದ್ದುಮಾಡಿ ನಮ್ಮ ಕೃಷಿ ಉತ್ಪನ್ನಗಳಿಗೆ ಹೊರರಾಷ್ಟ್ರಗಳಲ್ಲಿ ಬೇಡಿಕೆ ಬರುವಂಥ ಪರಿಸ್ಥಿತಿಯನ್ನು, ಸನ್ನಿವೇಶವನ್ನು ಸೃಷ್ಟಿ ಮಾಡಿ ರಫ್ತನ್ನು ಹೆಚ್ಚು ಮಾಡುವುದರ ಜೊತೆಗೆ ಕೃಷಿ ಉತ್ಪನ್ನಗಳ ಬೆಲೆ ಹೆಚ್ಚು ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ನಾನು ಆಗಲೇ ಹೇಳಿದೆ. ನಮ್ಮ ಉತ್ಪನ್ನಗಳಿಗೆ ಹೆಚ್ಚು ಬೆಲೆ ಬರಬೇಕಾದರೆ ನಮ್ಮ ಕನ್ಸರ್ ವೇಟಿವ್ ಯುಟಿಲಿಟಿ ಏನಿದೆ, ಈಗೇನು ಬೆಳಿಗ್ಗೆ ಎದ್ದರೆ ರಾಗಿಮುದ್ದೆ ಮಾಡಿಕೊಂಡು ತಿನ್ನುತ್ತೇವೆ, ಭತ್ತದಿಂದ ಅನ್ನ ಮಾಡಿಕೊಂಡು ತಿನ್ನುತ್ತೇವೆ ತರಕಾರಿಯಾದರೆ ಬರೇ ಸಾರು ಮಾಡಿಕೊಂಡು ತಿನ್ನುತ್ತೇವೆ. ನಾನು ಇಸ್ರೇಲ್‌ಗೆ ಹೋಗಿಲ್ಲ. ಮಾನ್ಯ ಬೈರೇಗೌಡರ ಕಾಟವನ್ನು ತಡೆಯುವುದಕ್ಕಾದರೂ ಈಗ ನಾನು ಅಲ್ಲಿಗೆ ಹೋಗಿಬರಬೇಕೆಂದು ಆಲೋಚನೆ ಮಾಡಿದ್ದೇನೆ. ದಿನಬೆಳಗಾದರೆ ಅವರು ಇಸ್ರೇಲ್ ಬಗ್ಗೆ ಹೇಳುತ್ತಿರುವುದು, ನಾವು ಅದನ್ನು ಸುಮ್ಮನೆ ಕೇಳುವುದು ಸಾಧ್ಯವಿಲ್ಲ. ಯಾರದ್ದಾದರೂ ಕೈಕಾಲು ಹಿಡಿದು ಒಂದು ಸಾರಿ ಇಸ್ರೇಲ್‌ಗೆ ಹೋಗಿಬರೋಣವೆಂದು ತೀರ್ಮಾನ ಮಾಡಿದ್ದೇನೆ. ನಾನು ಓದಿಕೊಂಡಿರುವ ಪ್ರಕಾರ ಈ ಕೃಷಿ ಉತ್ಪನ್ನಗಳು ಏನಿವೆ, ಅವುಗಳನ್ನು ನಮ್ಮ ಸ್ವಾಭಾವಿಕ ಉಪಯೋಗದ ಜತೆಗೆ ಆಗ್ರೋಬೇಸ್ಡ್ ಇಂಡಸ್ಟ್ರೀಸ್ ತರಹ ಮಾಡಿ ಬೇರೆ ಬೇರೆ ರೀತಿಯಲ್ಲಿ ಉಪಯೋಗ ಮಾಡುವಂಥ ವ್ಯವಸ್ಥೆ ಮಾಡಬೇಕು. ಟೊಮೆಟೊ ಹಣ್ಣನ್ನು ಬರೇ ಸಾರಿಗೆ ಉಪಯೋಗ ಮಾಡಿಕೊಂಡರೆ ಆಗುವುದಿಲ್ಲ. ಈಗ

ಪ್ರಯತ್ನ ನಡೆಯುತ್ತಿದೆ. ತರಕಾರಿಯನ್ನು ಬರೇ ಸಾರಿಗೆ ಉಪಯೋಗ ಮಾಡಿಕೊಂಡರೆ ಆಗುವುದಿಲ್ಲ. ಆದ್ದರಿಂದ ನನ್ನ ಒಂದು ಆಲೋಚನೆ, ಚಿಂತನೆ ಏನಪ್ಪ ಎಂದರೆ To establish agro-based industires for better utilisation of agricultural products. ಅದನ್ನು ಕೂಡ ಸರ್ಕಾರದವರು ಮಾಡಬೇಕಾಗುತ್ತದೆ ಎಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಕೆ.ಎಸ್.ಎಂ.ಬಿ. (ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್) ಅಂತ ಮಾಡಿದ್ದಾರೆ. ಅದರ ಒಂದು ತತ್ವವನ್ನು ಬಹುಶಃ ಎಲ್ಲ ಕೃಷಿ ಮಾರುಕಟ್ಟೆ ಉತ್ಪನ್ನಗಳಿಗೂ ಕೂಡ ಲಂಬಿಸಬಹುದೇನೋ, ವಿಸ್ತರಿಸಬಹುದೇನೋ. I congratulate the officer who is responsible for establishment of those things. ಇವತ್ತು ಏನಾದರೂ ಆ ಒಂದು ಪರಿಸ್ಥಿತಿ ಸುಧಾರಣೆಯಾಗಿದ್ದರೆ ಅದೇ ಕಾರಣ. ಅದೊಂದೇ ದಾರಿಯಲ್ಲಿ. ಈ ಎಲ್ಲ ಕೃಷಿ ಉತ್ಪನ್ನಗಳ ಬೆಲೆಯನ್ನು ಸ್ಟೆಬಿಲೈಸ್ ಮಾಡುವುದಕ್ಕೆ, ಹಿಡಿತದಲ್ಲಿಟ್ಟುಕೊಳ್ಳುವುದಕ್ಕೆ ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪನೆ ಮಾಡಿ ಅದರ ಮೂಲಕ ಇದನ್ನು ಸಾಧಿಸುವುದಕ್ಕೆ ಸಾಧ್ಯ. ಈ ಕೆಲಸವನ್ನು ಸರ್ಕಾರ ಮಾಡಲಿ ಎಂದು ಪ್ರಾರ್ಥನೆ ಮಾಡಿಕೊಂಡು ಇದೆಲ್ಲದರ ಜೊತೆಗೆ ಹಣ ಖರ್ಚಾಗದೆ ಯಾವುದೇ ಒಂದು ವಿವಾದಾಸ್ಪದವಾಗುವಂಥಾದ್ದು ಇಲ್ಲದೆ, ನಮ್ಮ ರೈತರಿಗೆ ಮಾಡುವಂಥ ಕೆಲವು ಉಪಯೋಗಗಳಿವೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇಲ್ಲ. ಸಂಬಂಧಪಟ್ಟ ಮಂತ್ರಿಗಳು, ಮಾನ್ಯ ಚಂದ್ರೇಗೌಡರು ದಯವಿಟ್ಟು ಗಮನಿಸಬೇಕು. ಹಣ ಖರ್ಚಾಗದೇನೆ ರೈತರಿಗೆ ಸಹಾಯ ಮಾಡುವಂಥ ಕೆಲವು ಸಂದರ್ಭಗಳು ಇವೆ. ಒಂದು, ಅನಾವಶ್ಯಕವಾಗಿ ರೈತರ ಮೇಲೆ ಅನೇಕ ಮೊಕದ್ದಮೆಗಳನ್ನು ಹೂಡಿದ್ದಾರೆ. ಇದಕ್ಕೆ ಏನೂ ಖರ್ಚಾಗುವುದಿಲ್ಲ. ಇವೆಲ್ಲವೂ ಯಾವ್ಯಾವುದೋ ಪ್ರತಿಭಟನೆ ಮಾಡುವಾಗ ಕೇಸು ಹಾಕಿರುವಂಥಾದ್ದು. ಇಲ್ಲಿ ಹೀನಾಯ ಕೃತ್ಯಗಳು ಯಾವುದೂ ಇಲ್ಲ. ಎಲ್ಲ ರಸ್ತೆ ತಡೆ ಮಾಡಿದ್ದು, ಧಿಕ್ಕಾರ ಕೂಗಿದ್ದೇ ಇರುವುದು. ಆದ್ದರಿಂದ ಕರ್ನಾಟಕ ರಾಜ್ಯದಲ್ಲಿ ರೈತರ ಮೇಲೆ ಹಾಕಿರತಕ್ಕಂಥ ಎಲ್ಲ ಕೇಸುಗಳನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ಒಂದು ಸಾರಿ ಹೇಳಿದ್ದಾರೆ. ಅದನ್ನು ದಯವಿಟ್ಟು ಆದಷ್ಟು ಬೇಗ ಕಾರ್ಯರೂಪಕ್ಕೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅನನ್ಯವಾಗಿ ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ. ಇದು ಸಂದರ್ಭ ಅಲ್ಲದೇ ಇದ್ದರೂ ಕೂಡ ನಾನು ಈ ಅವಕಾಶವನ್ನು ಉಪಯೋಗಿಸಿಕೊಳ್ಳುತ್ತೇನೆ. ಎರಡನೇಯದು, ನಮ್ಮ ಅದೃಷ್ಟಕ್ಕೋ, ದುರಾದೃಷ್ಟಕ್ಕೋ ನಮ್ಮ ಈ ಕೃಷಿ ಉತ್ಪನ್ನಗಳ ಬೆಲೆ ಬಿದ್ದುಹೋಗಿದೆ, ಗ್ರಾಮೀಣ ಕೃಷಾಂಕವನ್ನು ಸಹ ಕಿತ್ತುಹಾಕಿದ್ದಾರೆ. ಅದೇನು ಸೀಮೆ ಜಡ್ಜ್‌ಗಳೋ, ಯಾವ ಸೀಮೆ ನ್ಯಾಯಾಲಯಗಳೋ, ನಾವೇ ಕಾನೂನು ಓದಿಲ್ಲವೋ ನನಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು :— ನ್ಯಾಯಾಲಯದ ಬಗ್ಗೆ ಮಾತನಾಡುವುದು ಬೇಡ.

ಶ್ರೀ ವೈ.ಕೆ. ರಾಮಯ್ಯ :— ನನಗೆ ಕೋರ್ಟಿನ ಬಗ್ಗೆ, ನ್ಯಾಯಾಧೀಶರ ಬಗ್ಗೆ ಅತ್ಯಂತ ಹೆಚ್ಚಿನ ಗೌರವ ಇದೆ. ನನಗೆ ಹೇಳಿಕೊಟ್ಟಿದ್ದಾರೆ- "You respect the seat, not the person" ಎಂದು. ಆದ್ದರಿಂದ ನ್ಯಾಯಾಲಯ ಪೀಠದ ಬಗ್ಗೆ ನಾನು ಹೇಳುತ್ತಿಲ್ಲ. ನ್ಯಾಯಾಧೀಶರ ಬಗ್ಗೆ ಹೇಳುತ್ತಿದ್ದೇನೆ....

SRI P.G.R. SINDHYA :— Sir, How can he discuss the conduct of a judge here? You cann't discuss . ಜಡ್ಜ್‌ಗಳ ಬಗ್ಗೆ ನೀವು ಇಷ್ಟು ಲಘುವಾಗಿ ಮಾತನಾಡಿದರೆ ಅದು ಹೇಗೆ ಆಗುತ್ತದೆ? You are a lawyer. Mr. Chandregowda is also a lawyer. ನೀವೆಲ್ಲ ಲಾಯರ್ ಆಗಿ ಇದ್ದವರು.

SRI Y.K. Ramaiah :— ನಾನು ಹೇಳುವವರೆಗೆ ನೀವು ಕೇಳುತ್ತಿಲ್ಲ. ನಾನು ಮುಂದೆ ಹೇಳಿದರೆ ಅದು ನಿಮಗೇ ಅರ್ಥವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಅಲ್ಲ ಸ್ವಾಮಿ, ಕೃಷಿ ಉತ್ಪನ್ನಗಳ ಬೆಲೆ ಕಡಿಮೆ ಆಗಿರುವುದಕ್ಕೂ, ಗ್ರಾಮೀಣ ಕೃಪಾಂಕಕ್ಕೂ ಏನು ಸಂಬಂಧ?

ಶ್ರೀ ವೈ.ಕೆ. ರಾಮಯ್ಯ :— ನೂರಕ್ಕೆ ನೂರು ಸಂಬಂಧ ಇದೆ. ನಾನು ಏಕೆ ಹೇಳಿದೆನೆಂದರೆ, ರೈತರ ಕಷ್ಟ ಜಾಸ್ತಿಯಾಗುವುದಕ್ಕೆ ಕೃಷಿ ಉತ್ಪನ್ನಗಳ ಬೆಲೆ ಕಡಿಮೆಯಾಗಿರುವುದು ಕಾರಣವಾಗಿದೆ. ಅದರ ಜೊತೆಗೆ ಕೃಪಾಂಕವನ್ನು ಬೇರೆ ಕಿತ್ತುಹಾಕಿದ್ದಾರೆ. ನಿಮ್ಮ ಕಾನೂನು ಕಟ್ಟಲೆಗಳು ಕೋರ್ಟು ನಿರ್ಲಕ್ಷ್ಯವಾಗಿ ತೀರ್ಮಾನಿಸಲಿಕ್ಕೆ ಹೋಗಿಯಾಗಿವೆ. ಅದನ್ನು ಕೂಡ ಬಗೆಹರಿಸುವ ಮುಖಾಂತರ ಕೃಷಿಕರ ಕಣ್ಣೀರನ್ನು ಒರೆಸಿ ಸ್ವಾಮಿ ಎಂದು ಹೇಳುವುದಕ್ಕೆ ನಾನು ಹೇಳಿದ್ದೇನೆ. ಹೌದಾ? ಸುಮ್ಮನೆ ನೀವು ಎದ್ದು ನಿಂತುಬಿಟ್ಟರೆ ಹೇಗೆ? ಸ್ವಲ್ಪ ಸಮಾಧಾನ ತೆಗೆದುಕೊಳ್ಳಬೇಕು ಸ್ವಾಮಿ. ನೀವು ಹೇಳಿದ್ದೀರಿ. ನಾವು ಇನ್ನೂ ಹನಿಮೂನ್ ಪೀರಿಯಡ್‌ನಲ್ಲೇ ಇದ್ದೇವೆ. ಇನ್ನು ಹೆರಿಗೆ ನೋವು ಬರುವುದು ಎರಡು-ಮೂರು ವರ್ಷಗಳಾಗುತ್ತದೆ. ಸ್ವಲ್ಪ ತೆಗೆದುಕೊಳ್ಳಿಸ್ವಾಮಿ. Still we are in honeymoon period. Allow us to enjoy.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಮಾನ್ಯ ಅಧ್ಯಕ್ಷರೆ, ಇವರ ಹನಿಮೂನ್ ಪೀರಿಯಡ್‌ನಲ್ಲಿ ಮಾನ್ಯ ವೈ.ಕೆ. ರಾಮಯ್ಯನವರಂಥ ಅನುಭವಸ್ಥರು ಸರ್ಕಾರದಲ್ಲಿ ಇದ್ದಿದ್ದರೆ- I would have been the first man to enjoy. Unfortunately, he is not. That is the problem.

ಅಧ್ಯಕ್ಷರು :— ಮುಂದುವರಿಸಿ.

ಶ್ರೀ ವೈ.ಕೆ. ರಾಮಯ್ಯ :— ನನ್ನ ಮಾತನ್ನು ಮುಗಿಸುವುದಕ್ಕೆ ಮೊದಲು ಸ್ಪಷ್ಟವಾಗಿ ಒಂದು ಅಭಿಪ್ರಾಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಎಂದಿನವರೆಗೆ ಈ

ದೇಶದಲ್ಲಿ ಅನಾವಶ್ಯಕವಾಗಿ ಕುಂಟು ನೆಪಗಳನ್ನು ಒಡ್ಡಿ ಕೃಷಿ ಉತ್ಪನ್ನಗಳನ್ನು ಆಮದು ಮಾಡಿಕೊಳ್ಳುವಂಥ ಅನಿಷ್ಟ ಪದ್ಧತಿ ಮುಂದುವರೆಯುತ್ತದೋ ಅಂದಿನವರೆಗೆ ಈ ನಾಡಿನಲ್ಲಿ ಕೃಷಿ ಉದ್ಧಾರವಾಗುವುದಿಲ್ಲ. ಅದಕ್ಕೆ ಬದಲಾಗಿ ಕೃಷಿ ನಾಶವಾಗುತ್ತದೆ. ಆದ್ದರಿಂದ ನಾನು ಕೇಂದ್ರ ಸರ್ಕಾರದಲ್ಲಿ ಎಲ್ಲ ಸ್ನೇಹಿತರ ಜತೆಯಲ್ಲಿ ಸೇರಿಕೊಂಡು ಈ ಆಮದು ಪದ್ಧತಿಯನ್ನು ಆದಷ್ಟು ಬೇಗ ನಿಲ್ಲಿಸಿ ಕೃಷಿ ಉದ್ಯಮ ಈ ರಾಷ್ಟ್ರದಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಂಥ ತಮಗೆ ವಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಎಸ್.ಎಸ್. ಭೋಸರಾಜು (ಮಾನ್ವಿ) :— ಮಾನ್ಯ ಅಧ್ಯಕ್ಷರೇ, ಕಳೆದ ಮೂರು-ನಾಲ್ಕು ದಿವಸಗಳಿಂದ ರಾಜ್ಯದಲ್ಲಿನ ಕೃಷಿಉತ್ಪನ್ನಗಳ ಬೆಲೆಗಳ ಬಗ್ಗೆ ನಾವು ಸಾಕಷ್ಟು ವಿಚಾರ ಮಾಡಿದ ಸಂದರ್ಭದಲ್ಲಿ ಅನೇಕ ಹಿರಿಯ ಸ್ನೇಹಿತರು ಈ ಗ್ಯಾಟ್ ಬಗ್ಗೆ, ಡಬ್ಲ್ಯೂ.ಟಿ.ಓ. ಬಗ್ಗೆ...

ಛೇರ್ಮನ್ (ಶ್ರೀ ಜಿ. ರಾಜುಗೌಡ) :— ನಾನು ಮಾನ್ಯ ಸಿಂಧ್ಯ ಅವರನ್ನು ಕರೆದಿದ್ದೇನೆ.

ಶ್ರೀ ಎಸ್.ಎಸ್. ಭೋಸರಾಜು :— ಒಂದು ನಿಮಿಷದಲ್ಲಿ ಮುಗಿಸುತ್ತೇನೆ. ಈಗ ಪ್ರಸ್ತುತ ಮಾರುಕಟ್ಟೆಯಲ್ಲಿ ಗೊಂದಲದ ಪರಿಸ್ಥಿತಿ ಇರುವಾಗ ರೈತರು ಬಜಾರಿಗೆ ಬಂದು ರಾಯಚೂರು, ಕೊಪ್ಪಳ, ಇನ್ನೂ ಅನೇಕ ಜಿಲ್ಲೆಗಳಲ್ಲಿ ಇವತ್ತು ಭತ್ತ ಮತ್ತು ಇತರ ಬೆಳೆಗಳ ಬಗ್ಗೆ ಇರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ನಮ್ಮ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ತೆಗೆದುಕೊಂಡಿರತಕ್ಕಂಥ ಕ್ರಮಗಳು ಏನು? ಇದು ಏನಾದರೂ ಸದ್ಯದ ಪರಿಸ್ಥಿತಿಯನ್ನು ಸರಿಪಡಿಸುವುದರಲ್ಲಿ ರೈತರಿಗೆ ಏನಾದರೂ ಉಪಯೋಗ ಆಗಬಹುದೇ ಎನ್ನತಕ್ಕಂಥ ದಿಸೆಯಲ್ಲಿ ನಾವು ಪ್ರಯತ್ನ ಮಾಡಬೇಕು. ಈಗಾಗಲೇ ಎರಡು ದಿವಸಗಳ ಹಿಂದೆ ಮಾತನಾಡಿದಾಗ ನಮ್ಮ ಆಹಾರ ಮಂತ್ರಿಗಳು ಹೇಳಿದರು, ಏನೆಂದರೆ ತಕ್ಷಣ ನಾವು ಸೆಂಟರ್ ಗಳನ್ನು ಪ್ರಾರಂಭ ಮಾಡುತ್ತೇವೆ, ಅದರ ಜೊತೆಯಲ್ಲಿ ರೈತರಿಗೆ ತೊಂದರೆ ಆಗದಹಾಗೆ ಕೇಂದ್ರಸರ್ಕಾರದ ಜತೆಯಲ್ಲಿ ಮಾತನಾಡಿದ್ದೇವೆ ಇನ್ನು ಎರಡು ದಿವಸದೊಳಗೆ ಪಂಜಾಬ್ ಮತ್ತು ಇತರ ರಾಜ್ಯಗಳಿಗೆ ಏನು ರಿಲ್ಯಾಕ್ಷೇಶನ್‌ನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ, ಅದನ್ನು ನಮ್ಮ ರಾಜ್ಯಕ್ಕೆ ಸಹಿತ ಕೊಡಬೇಕು ಎನ್ನುವ ಬೇಡಿಕೆಯನ್ನು ನಾವು ಮಾಡಿದ್ದೇವೆ, ಅದಕ್ಕೆ ನಮಗೆ ಅನುದಾನ ಸಿಗಬಹುದು ಎನ್ನುವಂಥ ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಇವತ್ತು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಬರೆದಿರತಕ್ಕಂಥಾದ್ದು, ಮಾನ್ಯ ಇನಾಂದಾರರು ಬರೆದಿರತಕ್ಕಂಥಾದ್ದು, ಮತ್ತು ಕೇಂದ್ರಸರ್ಕಾರದಿಂದ ನಮಗೆ ಬಂದಿರತಕ್ಕಂಥ ಪತ್ರಗಳು ನಮ್ಮ ಮುಂದಿವೆ. ಅದರ ಮೇಲೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಹಾಗಾಗಿ ಇವತ್ತು ರೈತರು ಬೀದಿಗೆ ಬಂದಿದ್ದರೂ ಭತ್ತ ಖರೀದಿಗೆ ಸೆಂಟರ್‌ಗಳನ್ನು ಪ್ರಾರಂಭ ಮಾಡಿಲ್ಲ. ಮತ್ತೆ ಈ ರಿಲ್ಯಾಕ್ಷೇಷನ್ ಕೂಡ ರಾಜ್ಯ ಸರ್ಕಾರಕ್ಕೆ ಸಿಗಲಿಲ್ಲ. ಇಂತಹ ಸಂದರ್ಭದಲ್ಲಿ ಕೇವಲ ಮುಂದಿನ ವರ್ಷಗಳಲ್ಲಿ ಆಗತಕ್ಕ ಗ್ಯಾಟ್ ಮತ್ತು ಅವರ ಜೊತೆಯಲ್ಲಿ ಮಾತನಾಡಿದ್ದನ್ನು, ತಕ್ಷಣವಾಗಿ ನಾಳೆಯೇ ಮಾರ್ಕೆಟ್‌ನಲ್ಲಿ

ಏನು ಪರಿಸ್ಥಿತಿ ಇದೆ, ರೈತರ ಪರಿಸ್ಥಿತಿಯನ್ನು ನಾವು ಯಾವ ರೀತಿಯಲ್ಲಿ ಸುಧಾರಿಸಬೇಕು, ಭತ್ತ, ಮೆಕ್ಕೆಜೋಳ ಹಾಗೂ ಇತರೆ ಯಾವುದೇ ಬೆಳೆ ಇರಲಿ, ಇವುಗಳನ್ನು ಖರೀದಿ ಮಾಡುವುದಕ್ಕೆ ಏನು ಪ್ರಯತ್ನ ಮಾಡುತ್ತಿದ್ದೇವೆಂಬುದನ್ನು ಮಾನ್ಯ ಕೃಷಿ ಸಚಿವರು ಹೇಳಬೇಕು. ಇವತ್ತು ಪತ್ರಿಕೆಗಳ ಮುಖಾಂತರ ಸಹಿತ ತಾವು ನೋಡಿದ್ದೀರಿ. ಗಂಗಾವತಿ, ಮಾನ್ವಿ, ರಾಯಚೂರು ಮತ್ತು ಸಿಂಧನೂರಿನಲ್ಲಿ ಧರಣಿ ಮಾಡತಕ್ಕ ರೈತರು ಮತ್ತು ಎಲ್ಲಾ ಪಕ್ಷಗಳಿಗೆ ಸೇರಿರತಕ್ಕವರು ಅಲ್ಲಿ ಕುಳಿತಿದ್ದಾರೆ. ಆ ರೈತರು ಕನಿಷ್ಟ ಬೆಲೆಯನ್ನು ಹೆಚ್ಚು ಮಾಡಬೇಕೆಂದು ಹೇಳಿರುವುದನ್ನು ತಾವು ಪತ್ರಿಕೆಯಲ್ಲಿ ನೋಡಿದ್ದೀರಿ. ಆ ಬೆಲೆಯನ್ನು ಹೆಚ್ಚು ಮಾಡುವುದಕ್ಕೆ ಏನಾದರೂ ಸಾಧ್ಯತೆ ಇದೆಯೋ ಅಥವಾ ಇಲ್ಲವೋ? ಅದರ ಜೊತೆಯಲ್ಲಿ ಇತರೆ ರಾಜ್ಯಗಳಾದ ಪಂಜಾಬ್ ಮತ್ತು ಬೇರೆ ಬೇರೆ ರಾಜ್ಯಗಳಿಗೆ ಕೊಟ್ಟಿರತಕ್ಕಂಥ ರಿಲ್ಯಾಕ್ಷೇಷನ್ ನಮ್ಮ ರಾಜ್ಯಕ್ಕೂ ಸಿಗುತ್ತದೆಯೇ ಅಥವಾ ಇಲ್ಲವೇ? ಇಲ್ಲದೇ ಇದ್ದ ಪಕ್ಷದಲ್ಲಿ ಕೇಂದ್ರಸರ್ಕಾರಕ್ಕೆ ನಾವೆಲ್ಲರೂ ಸೇರಿ, ವಿರೋಧಪಕ್ಷದ ನಾಯಕರನ್ನೂ ಒಳಪಡಿಸಿಕೊಂಡು, ಮಾನ್ಯ ಕೃಷಿ ಸಚಿವರು ಮತ್ತು ಮಾನ್ಯ ಆಹಾರ ಸಚಿವರು ನಾವು ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ, ಬೇರೆ ರಾಜ್ಯಗಳಿಗೆ ಕೊಟ್ಟಿರತಕ್ಕಂಥ ಒಂದು ಅವಕಾಶವನ್ನು ನಮ್ಮ ರಾಜ್ಯಕ್ಕೆ ಏಕೆ ಕೊಡಲಿಲ್ಲವೆಂದು ಹೇಳಬಾರದು? ಮತ್ತು ಅವರಿಗೆ ಏಕೆ ಕನ್‌ವೀನ್ಸ್ ಮಾಡಬಾರದು? ಎಂಬ ಮಾತನ್ನು ನಾನು ಕೃಷಿ ಸಚಿವರಲ್ಲಿ ವಿನಂತಿ ಮಾಡುತ್ತೇನೆ. ಅವರ ನಿಲುವು ಏನಿದೆ, ತಕ್ಷಣ ನಾವು ರೈತರಿಗೆ ಯಾವ ರೀತಿಯಲ್ಲಿ ಸಹಾಯ ಮಾಡಬಹುದು ಎಂಬ ಮಾತನ್ನು ಕೃಷಿ ಸಚಿವರು ಸದನದಲ್ಲಿ ತಿಳಿಸಬೇಕೆಂದು ನನ್ನ ಪ್ರಾರ್ಥನೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :— ಸನ್ಮಾನ್ಯ ಚೇರ್‌ಮನ್‌ರವರೆ, ನಿಯಮ 69ರ ಅಡಿಯಲ್ಲಿ ನಾವು ಕರ್ನಾಟಕ ರಾಜ್ಯದಲ್ಲಿ ರೈತರು ಬೆಳೆಯತಕ್ಕಂಥ ಬೆಳೆಗಳ ಬೆಲೆಗಳು ಕುಸಿತವಾಗಿರತಕ್ಕ ಹಿನ್ನೆಲೆಯಲ್ಲಿ ಕಳೆದ 4 ದಿನಗಳಿಂದ ನಾವು ಚರ್ಚೆಯನ್ನು ಮಾಡುತ್ತಾ ಇದ್ದೇವೆ. ನಾನು ಭಾವಿಸಿದ್ದೆ; ಸರ್ಕಾರದ ಜವಾಬ್ದಾರಿ ಹೊತ್ತಿರತಕ್ಕಂಥ ನಾಯಕರುಗಳು, ವಿಶೇಷವಾಗಿ ಮುಖ್ಯಮಂತ್ರಿಗಳು ಸರ್ಕಾರದ ನಿಲುವೇನು ಎಂಬುದನ್ನು ಹೇಳುತ್ತಾರೆಂದು ತಿಳಿದಿದ್ದೆ. ಈ ವಿಷಯ 3-4 ಇಲಾಖೆಗಳಿಗೆ ಸಂಬಂಧಪಟ್ಟಿದೆ. ಕೃಷಿ ಉತ್ಪನ್ನಕ್ಕೆ ಸಂಬಂಧಪಟ್ಟ ಹಾಗೆ ಮಾರುಕಟ್ಟೆ ಇಲಾಖೆ, ಆಹಾರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಸಹಕಾರವನ್ನು ಪಡೆದು ವಿತರಣೆ ಮಾಡುವಂತಹ ಆಹಾರ ಇಲಾಖೆ ಮತ್ತು ಕೃಷಿ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ವ್ಯವಸಾಯ ಇಲಾಖೆ; ಈ ಮೂರು ಇಲಾಖೆಗಳವರು ತುರ್ತಾಗಿ ಇವತ್ತು ರಾಜ್ಯದಲ್ಲಿರತಕ್ಕ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿತ್ತು. ಕಾರಣ ತಮಗೆ ತಿಳಿದಿರುವಹಾಗೆ ಇವತ್ತು ಬೀದರ್ ಜಿಲ್ಲೆಯ ರೈತರು ಬಹಳ ಇಕ್ಕಟ್ಟಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಒಂದು ಕಡೆ ಕಂದಾಯ ಮಂತ್ರಿಗಳು ನಿರೀಕ್ಷೆಯ ಪ್ರಮಾಣದಲ್ಲಿ ಸಹಾಯ ಮಾಡುವುದಕ್ಕಾಗಿಲ್ಲ. ಬೀದರ್ ಜಿಲ್ಲೆಯಲ್ಲಿ ವಿಪರೀತ ಮಳೆಯಿಂದಾಗಿ ನಮ್ಮ ರೈತರು ಬೆಳೆದಂಥ ಎಲ್ಲಾ ಬೆಳೆಗಳೂ ನಾಶವಾಗಿವೆ. ಎಣ್ಣೆಕಾಳಿನ ಬೆಳೆಗಳು ಇವತ್ತು ಸಂಪೂರ್ಣವಾಗಿ ನಾಶವಾಗಿವೆ. ಇದು ಒಂದು ಕಡೆ ಆಯಿತು. ಕಲ್ಬುರ್ಗಿಯಲ್ಲಿ ತೊಗರಿ ಬೆಳೆಗೆ ಬಂದಿರತಕ್ಕ ರೋಗಗಳು,

ಇದರಿಂದಾಗಿ ಕಲ್ಬುರ್ಗಿ ಜಿಲ್ಲೆ ಬೇಳೆಯ ಖನಿಜ ಎನ್ನತಕ್ಕ ಮಾತೇನಿತ್ತು, ಇವತ್ತು ಗುಲ್ಬರ್ಗಾ ಜಿಲ್ಲೆಯ ರೈತರು ಬಹಳ ಸಂಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿರತಕ್ಕ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಇನ್ನು ನಮ್ಮ ಕಡೆಯ ಸದಸ್ಯರಾದ ಶ್ರೀಮಾನ್ ಹಂಪನಗೌಡರು, ಶ್ರೀಮಾನ್ ಭೋಸರಾಜ್‌ರವರು, ಮತ್ತು ಶ್ರೀಮಾನ್ ಅಮರೇಗೌಡ ಬೈಯಾಪುರ್‌ರವರು ರಾಯಚೂರಿನಲ್ಲಿರತಕ್ಕ ಪರಿಸ್ಥಿತಿಯನ್ನು ಈ ಸದನಕ್ಕೆ ಮತ್ತು ರಾಜ್ಯಕ್ಕೆ ತಿಳಿಸಿದ್ದಾರೆ. ಮಂಡ್ಯ ಜಿಲ್ಲೆ ಯಾವ ರೀತಿ ಭತ್ತದ ಕಣಜ ಎಂದು ಹಳೆಯ ಕರ್ನಾಟಕದಲ್ಲಿ ನಾವು ಹೇಳುತ್ತೇವೆ, ಹಾಗೆಯೇ ಭತ್ತದ ಕಣಜವಾಗಿರತಕ್ಕ ರಾಯಚೂರು ಜಿಲ್ಲೆಯಲ್ಲಿ ಈ ವರ್ಷ ಕಳೆದ ಮೂರು ತಿಂಗಳ ಹಿಂದೆ ಮಾನ್ಯ ಸದಸ್ಯರಾದ ಹಂಪನಗೌಡರು ಆಂಧ್ರಪ್ರದೇಶದಲ್ಲಿನ ಮುಖ್ಯಮಂತ್ರಿಗಳು ಯಾವ ರೀತಿ ಜನಭೂಮಿ ಕಾರ್ಯಕ್ರಮವನ್ನು ಮಾಡಿದ್ದಾರೆ ಅದೇ ರೀತಿಯಲ್ಲಿ ಗ್ರಾಮೀಣ ರಸ್ತೆಗಳನ್ನು ಮಾಡಿಸುವ ದೃಷ್ಟಿಯಿಂದಾಗಿ, ಸಿಂಧೂರು ಭೂಮಿ ಎನ್ನತಕ್ಕ ಕಾರ್ಯಕ್ರಮವನ್ನು ಅವರು ಮಾಡುತ್ತಿದ್ದಾರೆ. ಅದು ಬಹಳ ಒಳ್ಳೆಯ ಕಾರ್ಯಕ್ರಮ. ತಾವು ಹೋಗಿ ನೋಡಿ ಬರಬೇಕು. ನಾನು ಮಾನ್ಯ ಸದಸ್ಯರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಆ ಕಾರ್ಯಕ್ರಮಕ್ಕೆ ಹೋದಾಗ ನಮಗೆ ರೈತರು ಅಡ್ಡ ಹಾಕಿದರು. ನಮ್ಮ ಭತ್ತ ಕೊಳ್ಳತಕ್ಕವರು ಇಲ್ಲ ಎಂದು ಹೇಳಿದರು. ನಾನು ಅವರ ಮಾತನ್ನು ನಂಬಲಿಕ್ಕೆ ಆಗಲಿಲ್ಲ. ಏಕೆಂದರೆ, ನಾವು ತೆಗೆದುಕೊಳ್ಳತಕ್ಕ ಸೋನಾಮಸೂರಿ ಅಕ್ಕಿ 24 ರೂಪಾಯಿಗಳಿಂದ 28 ರೂಪಾಯಿ ಆಗಿದೆ. ಆದರೆ, ಭತ್ತಕ್ಕೆ ಮಾತ್ರ ಒಂದು ಚೀಲಕ್ಕೆ 350 ರೂಪಾಯಿಯಿಂದ ನಾಲ್ಕೂನೂರು ರೂಪಾಯಿ ಇದೆ, ಇದಕ್ಕೆ ಕಾರಣವೇನು? ಈ ಭತ್ತವನ್ನು ತೆಗೆದುಕೊಳ್ಳತಕ್ಕವರು ಯಾರು ಇಲ್ಲ. ತಮಗೆ ಗೊತ್ತಿರುವ ಹಾಗೆ ತುಂಗಭದ್ರಾ ಅಚ್ಚುಕಟ್ಟಿನ ನೀರಿನಿಂದ ಬರತಕ್ಕ ಸುಮಾರು ಆರುವರೆ ಲಕ್ಷ ಎಕರೆ ಜಮೀನಿನಲ್ಲಿ ಬೆಳೆಯತಕ್ಕ ಭತ್ತ ಏನಿದೆ, ಆ ಭತ್ತವನ್ನು ಕೊಳ್ಳತಕ್ಕ ಸ್ಥಿತಿಯಲ್ಲಿ ಇಲ್ಲ. ಇವತ್ತು ಈ ಬಗ್ಗೆ ಪಕ್ಷಾತೀತವಾಗಿಯೇ ಮಾತನಾಡಬೇಕೆಂದು ಹೇಳಿದರೂ ಸಹಿತ ರಾಯಚೂರು ಎ.ಪಿ.ಎಂ.ಸಿ ಯಾಗಲೀ ಅಥವಾ ರಾಯಚೂರು ಜಿಲ್ಲೆಯ ಯಾವುದೇ ಒಂದು ಭಾಗದಲ್ಲಾಗಲೀ ಅಥವಾ ಸಿಂಧನೂರಿನಲ್ಲಾಗಲೀ ಭತ್ತವನ್ನು ಸರ್ಕಾರದವರು ಕೊಳ್ಳತಕ್ಕ ಸ್ಥಿತಿಯಲ್ಲಿ ಇಲ್ಲ. ಇನ್ನು ರಾಯಚೂರು ಬಿಟ್ಟು ನಾವು ಕೊಪ್ಪಳಕ್ಕೆ ಹೋದರೆ ಬಹುಶಃ ನಾವು ಏತಕ್ಕಾದರೂ ಈ ಮೆಕ್ಕೆಜೋಳವನ್ನು ಬೆಳೆದವು ಎಂದು ರೈತರು ತಮ್ಮಷ್ಟಕ್ಕೆ ತಾವೇ ಶಾಪ ಹಾಕಿಕೊಳ್ಳತಕ್ಕ ಸ್ಥಿತಿಗೆ ಹೋಗಿದ್ದಾರೆ. ಕಳೆದ 15 ದಿನಗಳ ಹಾಲದಿಂದ ಶ್ರೀಮಾನ್ ನಾಗಪ್ಪನವರ ಮನೆ ಮೇಲೆ ಎಲ್ಲಾ ರೈತರು ನುಗ್ಗತಕ್ಕ ಪರಿಸ್ಥಿತಿ ಬಂತು. ಅಲ್ಲಿಯ ಶಾಸಕರು ನಾವು ಹೇಗೆ ಊರಿಗೆ ಹೋಗುವುದು ಎಂದು ಇಲ್ಲಿ ಧರಣಿ ಮಾಡತಕ್ಕ ಸ್ಥಿತಿ ಕಳೆದ ಶುಕ್ರವಾರ ಬಂದಿತ್ತು. ಕೊಪ್ಪಳದಲ್ಲಿ ರೈತರು ನಾವು ಏಕೆ ಮೆಕ್ಕೆಜೋಳ ಬೆಳೆದೆವು ಎನ್ನುವ ಸ್ಥಿತಿಗೆ ಬಂದಿದ್ದಾರೆ. ಇನ್ನು ನಾವು ಬಳ್ಳಾರಿಗೆ ಹೋದರೆ, ಅಲ್ಲಿರತಕ್ಕ ಮೆಣಸಿನಕಾಯಿಯನ್ನು ಕೊಳ್ಳತಕ್ಕ ಸ್ಥಿತಿಯಲ್ಲಿ ಜನ ಇಲ್ಲ. ಬೆಳಗಾವಿಯಲ್ಲಿ ಸ್ವಲ್ಪಮಟ್ಟಿಗೆ ಕಬ್ಬನ್ನು ಬೆಳೆಯುವುದರಿಂದಾಗಿ, ಅವರು ಹತ್ತಿಯನ್ನು ಬಿಟ್ಟು, ಜೋಳವನ್ನು ಕಡಿಮೆ ಮಾಡಿರುವುದರಿಂದಾಗಿ ಇನ್ನೂ ಅಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟಿಲ್ಲ. ಒಂದುಸಾರಿ ಬೆಳಗಾವಿ, ಧಾರವಾಡದಲ್ಲಿ ಕಾನೂನು ಪರಿಸ್ಥಿತಿ ಹದಗೆಟ್ಟರೆ ಮತ್ತೆ ನಿಯಂತ್ರಣಕ್ಕೆ ತರುವುದಕ್ಕಾಗುವುದಿಲ್ಲ. ನೀವಿದ್ದಂಥ ಸರ್ಕಾರ

ಅವತ್ತು ಹೋಗಿದ್ದೂ ಅದೇ ಕಾರಣ ಎಂಬುದು ತಮಗೆ ಗೊತ್ತಿದೆ. ಇವತ್ತು ಹಾವೇರಿಯಲ್ಲಿ ಮತ್ತು ಧಾರವಾಡದಲ್ಲಿ ಜೋಳವನ್ನು ಕೊಳ್ಳತಕ್ಕಸ್ಥಿತಿಯಲ್ಲಿ ನಿಜವಾಗಿಯೂ ಸರ್ಕಾರ ಇಲ್ಲ. ಸ್ವಲ್ಪ ನಾವು ಆ ಕಡೆಯಿಂದ ಇಳಿದು ಬರುತ್ತೇವೆಂದರೆ, ಚಿತ್ರದುರ್ಗ, ಚಿಕ್ಕಮಗಳೂರು ಈ ಜಿಲ್ಲೆಗಳಲ್ಲಿ ಇವತ್ತು ತೆಂಗಿನಕಾಯಿಗಾಗಲೀ, ಕೊಬ್ಬರಿಗಾಗಲೀ ಕೊಳ್ಳುವವರು ಯಾರೂ ಸಹಿತ ಇಲ್ಲ. ನಮ್ಮ ಗೌರವಾನ್ವಿತ ಸದಸ್ಯರು ಹೇಳುತ್ತಾ ಇದ್ದರು; ಬಸ್ಸಿನಲ್ಲಿ ಕುಳಿತಾಗ ಒಂದು ರೂಪಾಯಿಗೆ 4 ನಿಂಬೆಹಣ್ಣು ಎಂದು ಹೇಳುತ್ತಿದ್ದರು. ಅದೇರೀತಿಯಲ್ಲಿ ಈಗ ಹತ್ತು ರೂಪಾಯಿಗೆ 5-6 ತೆಂಗಿನಕಾಯಿ ತೆಗೆದುಕೊಂಡು ಹೋಗಿ ಎನ್ನುವ ಸ್ಥಿತಿ ಬಂದಿದೆ. ಒಂದು ಕಡೆ ಕಳೆದ ಎರಡು ವರ್ಷಗಳಲ್ಲಿ ನುಸಿ ರೋಗ ಬಂತು. ಆ ನುಸಿ ರೋಗವನ್ನು ನಾವು ಯಾರೂ ಸಹಿತ ನಿಯಂತ್ರಣ ಮಾಡುವುದಕ್ಕಾಗಲಿಲ್ಲ. ಅದು ತುಮಕೂರು ಜಿಲ್ಲೆ ಇರಬಹುದು, ಚಿತ್ರದುರ್ಗ ಜಿಲ್ಲೆ ಇರಬಹುದು, ಚಿಕ್ಕಮಗಳೂರು ಜಿಲ್ಲೆ ಇರಬಹುದು ಶಿವಮೊಗ್ಗ ಜಿಲ್ಲೆ ಇರಬಹುದು; ಹಾಸನ ಜಿಲ್ಲೆ ಇರಬಹುದು. ಈ ಎಲ್ಲಾ ಜಿಲ್ಲೆಗಳಲ್ಲೂ ಸಹಿತ ನಾವೇಕೆ ತೆಂಗಿನಕಾಯಿ ಬೆಳೆದೆವು, ಕೊಬರಿ ಬೆಳೆದೆವು ಎನ್ನುವ ಸ್ಥಿತಿ ಇದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ಚಾಮರಾಜನಗರ ಜಿಲ್ಲೆಯಲ್ಲೂ ಸಹಿತ ತೆಂಗಿನಕಾಯಿ ಬೆಲೆ ಸಂಪೂರ್ಣವಾಗಿ ಕುಸಿತ ಆಗಿದೆ. ಕೊಳ್ಳತಕ್ಕಂಥವರು ಯಾರೂ ಇಲ್ಲ, ಇದು ತಮಗೆ ಗೊತ್ತಿದೆ. ಈ ವರ್ಷ ಒಂದು ಕಡೆ ಮಳೆ ಜಾಸ್ತಿಯಾಗಿ ರೈತರಿಗೆ ಹಾನಿ ಆಯಿತು. ಎಲ್ಲಾ ಬೆಳೆಗಳೂ ಹೋದವು. ಇನ್ನೊಂದು ಕಡೆ ಬೆಳೆದಿರತಕ್ಕ ಬೆಳಗಳಿಗೆ ಬೆಲೆ ಇಲ್ಲ, ಅಂತಹ ಸ್ಥಿತಿಗೆ ನಾವು ಬಂದಿದ್ದೇವೆ. ಇದನ್ನು ವಿಶ್ಲೇಷಣೆ ಮಾಡುವಂಥ ಸಂದರ್ಭದಲ್ಲಿ ನಮ್ಮ ಪ್ರೊಫೆಸರ್ ಬಿ.ಕೆ. ಚಂದ್ರಶೇಖರ್‌ರವರು ಈ ಸಭೆಯಲ್ಲಿರತಕ್ಕಂತಾದ್ದು ನನಗೆ ಬಹಳ ಸಂತೋಷವಾಗಿದೆ. ಕಾರಣ ಬಹುಶಃ ಕಾಂಗ್ರೆಸ್ ಪಕ್ಷದ 1999ರ ಚುನಾವಣಾ ಪ್ರಣಾಳಿಕೆಯನ್ನು ಬರೆದಿರುವವರಲ್ಲಿ ಬಿ.ಕೆ. ಚಂದ್ರಶೇಖರ್‌ರವರು ಅಗ್ರಗಣ್ಯರೆಂದು ನಾನು ಭಾವಿಸಿದ್ದೇನೆ. ಒಂದುವೇಳೆ ಇದು ತಪ್ಪಿದ್ದರೆ ತಿದ್ದಿಕೊಳ್ಳುವುದಕ್ಕೆ ನಾನು ತಯಾರಾಗಿದ್ದೇನೆ. ಅಧ್ಯಕ್ಷರೇ, ತಾವೂ ಕೂಡ ಇದನ್ನು ಗಮನಿಸಿರುತ್ತೀರಿ. ಪ್ರಣಾಳಿಕೆಯಲ್ಲಿ ಏನು ಹೇಳಿದ್ದಾರೆಂದರೆ, ರೈತರ ಸಮಸ್ಯೆಗಳು ಒಂದಲ್ಲ, ರೈತರ ಉತ್ಪನ್ನಗಳ ಶೇಕಡ 50ರಷ್ಟು ಮೌಲ್ಯವನ್ನು ಮುಂಗಡವಾಗಿ ನೀಡಿ ಅಂದರೆ ನಾವು ಅಡ್ವಾನ್ಸಾಗಿ ಕೊಟ್ಟಿಬಿಡುತ್ತೇವೆ. 10 ಸಾವಿರ ತೆಂಗಿನಕಾಯಿ ಇದ್ದರೆ, 5 ಸಾವಿರ ತೆಂಗಿನಕಾಯಿಗೆ ನಾವು ಮುಂಗಡ ಅಡ್ವಾನ್ಸ್ ನಿಮಗೆ ಕೊಟ್ಟಬಿಡುತ್ತೇವೆ. ತನ್ಮೂಲಕ ಒತ್ತಡಕ್ಕೆ ಮಣಿದು ಕಡಿಮೆ ಬೆಲೆಗೆ ಉತ್ಪನ್ನಗಳನ್ನು ಮಾರಾಟ ಮಾಡಬೇಕಾಗಿ ಬರುವ ಪರಿಸ್ಥಿತಿಗಳನ್ನು ನಮ್ಮ ಪಕ್ಷ ನಿವಾರಿಸುತ್ತದೆ. ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ಇದಲ್ಲದೆ ಇನ್ನೂ ಏನೇನೋ ಹೇಳಿದ್ದಾರೆ, ಅದನ್ನೆಲ್ಲಾ ಈ ಸಂದರ್ಭದಲ್ಲಿ ಹೇಳುವುದಕ್ಕಾಗುವುದಿಲ್ಲ. ನಮ್ಮ ಕೃಷ್ಣೆಯ ಕಣ್ಣೇರಿನ ಮಂತ್ರಿಗಳಾದ ಶ್ರೀಮಾನ್ ಹೆಚ್.ಕೆ. ಪಾಟೀಲರು ಒಂದು ಕಡೆ ಹೇಳಿದ್ದಾರೆ. ಇವೆಲ್ಲಾ ಜನಗಳ ಕಣ್ಣಿಗೆ ಮಣ್ಣೆರಚತಕ್ಕ ಮಾತುಗಳು ಪಶ್ಚಿಮದಿಂದ ಹರಿದು ಬಂದು ಸಮುದ್ರ ಸೇರುವ ನದಿಗಳ ನೀರನ್ನು ಹಾಸನ, ತುಮಕೂರು, ಮಂಡ್ಯ ಹಾಗೂ ಬೆಂಗಳೂರಿಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಇವತ್ತು ರಾಜ್ಯದಲ್ಲಿ ಮೆಣಸಿನಕಾಯಿ ತೆಂಗಿನಕಾಯಿ ಇತ್ಯಾದಿ ಬೆಳೆಗಳ ವಿಚಾರದಲ್ಲಿ ರೈತರು ಯಾವ ಸ್ಥಿತಿಗೆ

ತಲುಪಿದ್ದಾರೆ ಎಂಬುದಕ್ಕೆ ನಾನು ಹೇಳುತ್ತಿದ್ದೇನೆ. ಅದು ಒಂದೇ ಅಲ್ಲ; ಭತ್ತ, ಮುಸುಕಿನ ಜೋಳ, ಸೇಂಗಾ, ಅಡಿಕೆ, ಎಣ್ಣೆಕಾಳುಗಳು, ಮೆಣಸಿನಕಾಯಿ, ಜೋಳ, ಈರುಳ್ಳಿ, ತೊಗರಿ ಈ ಎಲ್ಲಾ ಬೆಳೆಗಳ ಬೆಲೆಗಳು ಸಹಿತ ಕಡಿಮೆಯಾಗುತ್ತಿದೆ. ಮಾನ್ಯ ಚೇರಮನ್‌ರವರೇ,

6.20 ಪಿ.ಎಂ.

ತಾವು ರಾಗಿ ಬೆಳೆಯುವ ಪ್ರದೇಶದಿಂದ ಬರುವವರು. ಕಳೆದ ವರ್ಷ ಒಂದು ಕ್ವಿಂಟಾಲ್ ರಾಗಿಗೆ 450 ರಿಂದ 520 ರೂಪಾಯಿಗಳವರೆಗೆ ಧಾರಣೆ ಇತ್ತು. ಈಗ ಇನ್ನು ಬೆಳೆಗಳು ಬಂದಿಲ್ಲ. ಇನ್ನು ಸ್ವಲ್ಪ ದಿವಸದಲ್ಲಿ ರಾಗಿ ಬರುತ್ತದೆ. ಈಗಲೇ ರಾಗಿ ಕ್ವಿಂಟಾಲಿಗೆ 300ರಿಂದ 350 ಇದೆ. ರಾಗಿಯನ್ನು ಕೊಳ್ಳತಕ್ಕ ಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ಆಡಳಿತ ಪಕ್ಷದಲ್ಲಿರುವ ಮುಖಂಡರುಗಳು ಪಕ್ಷಾತೀತವಾಗಿ ಮಾತನಾಡಬೇಕು. ತಾವು ದೆಹಲಿಗೆ ಹೋಗುತ್ತಿದ್ದೇವೆ ಇದು ಕೇಂದ್ರ ಸರ್ಕಾರದ ಕಡೆ ಬೊಟ್ಟು ತೋರಿಸಿ ಮಾತನಾಡತಕ್ಕ ಕೆಲಸವನ್ನು ಮಾಡಲು ಹೊರಟಿದ್ದೀರಿ. ಈ ಉಪದೇಶ, ಪುರಾಣವನ್ನು ಹೇಳಲು ಹೊರಟಿದ್ದೀರಲ್ಲ ನೀವು ಚುನಾವಣಾ ಪ್ರಣಾಳಿಕೆಯನ್ನು ಬರೆಯುವಾಗ ಇದೆಲ್ಲ ಜ್ಞಾಪಕದಲ್ಲಿ ಇರಲಿಲ್ಲವೆ ಎಂಬ ಬಗ್ಗೆ ಪ್ರಶ್ನೆ ಕೇಳಿದರೆ ತಾವುಗಳು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ಭಾವಿಸುತ್ತೇನೆ. ನಾನು ಮಾನ್ಯ ಮುಖ್ಯಮಂತ್ರಿಗಳಿಂದ ಕೊನೆಯಪಕ್ಷ ಏನನ್ನು ನಿರೀಕ್ಷೆ ಮಾಡಿದ್ದೆ ಎಂದರೆ, ಡಾ: ರಾಜ್‌ಕುಮಾರ್‌ರವರು ಬಿಡುಗಡೆಯಾದಮೇಲೆ ಮಾತನಾಡುತ್ತಾ, ನಕ್ಕಿರನ್ ಗೋಪಾಲ್‌ರವರು ನನಗೆ ರಾಧಾಕೃಷ್ಣನ್‌ರವರ ಸಮಾನರೆಂದು ಅವರಿಂದ ನಾನು ಬಿಡುಗಡೆಯಾಗಿ ಬಂದೆ ಎಂದು ಹೇಳಿದರು. ಆದರೆ ಇದರ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತಿದ್ದಾಗ ನಮಗೆ ಗೊತ್ತಿಲ್ಲದೆ ಮುಖ್ಯಮಂತ್ರಿಗಳು ನಮ್ಮ ಬೆನ್ನು ತಟ್ಟಿದರು, ನಾವು ಅವರ ಬೆನ್ನುತಟ್ಟಿದೆವು. ಆದರೆ ಬಿಡುಗಡೆಯಾಗಿದ್ದೇ ಬೇರೆ ಕಾರಣಕ್ಕೆ. ಆ ರೀತಿ ಪರಿಸ್ಥಿತಿ ನಮಗೆ ಆಗಿಬಿಟ್ಟಿದೆ. ಮಾನ್ಯ ಮುಖ್ಯಮಂತ್ರಿಗಳು ಈ ಸದನ ಪ್ರಾರಂಭವಾದ ದಿವಸದಿಂದ ವ್ಯವಸಾಯ ಇಲಾಖೆ, ಆಹಾರ, ಕೃಷಿ, ಹಣಕಾಸು ಇಲಾಖೆಗಳಿಗೆ ಇಷ್ಟು ಹಣವನ್ನು ಕೊಟ್ಟಿದ್ದೇವೆ, ಇಂತಿಂಥ ತಾಲ್ಲೂಕಿನಲ್ಲಿ ಹೋದ ವರ್ಷ ಇಷ್ಟು ಬೆಳೆ ಬೆಳೆದಿದ್ದರು, ಈ ವರ್ಷ ಇಷ್ಟು ಬೆಳೆ ಬರಬಹುದು ಎಂದು ಟಾರ್ಗೆಟ್‌ನ್ನು ನಿಗದಿ ಮಾಡಿರುತ್ತಾರೆ. ನಾವು ಇಷ್ಟು ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಬಹುದು ಎಂದು ಹೇಳಿಕೆಯನ್ನು ಕೊಟ್ಟು ಇಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಾರೆಂದುಕೊಂಡಿದ್ದೆ. ಅನಂತರ ಡಬ್ಲ್ಯೂಟಿಓ. ಗ್ಯಾಟ್, ಅಂತರ್ ರಾಷ್ಟ್ರೀಯ ಒಪ್ಪಂದಗಳು, ರಾಜ್ಯ ಮತ್ತು ಕೇಂದ್ರದ ರಿಲೇಷನ್‌ಷಿಪ್ ಸಾರ್ಕ್ ಒಪ್ಪಂದ ಮುಂತಾದವುಗಳ ಬಗ್ಗೆ ನಾವು ಇಲ್ಲೇ ಚರ್ಚೆ ಮಾಡಬೇಕಾಗುತ್ತದೆ. ಇದನ್ನು ಗ್ರಾಮ ಸಭೆಗಳಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಇದು ಬಹಳ ಅವಶ್ಯಕವಾಗಿ ಇಲ್ಲಿ ಚರ್ಚೆ ಮಾಡಬೇಕು. ರಾಜಕೀಯ ವೈಪಮ್ಯದಿಂದಾಗಿ ಗ್ರಾಮಪಂಚಾಯಿತಿಗಳನ್ನು ನಾವು ಯಾವ ಮಟ್ಟಕ್ಕೆ ತೆಗೆದುಕೊಂಡು ಹೋಗಿದ್ದೇವೆಂದು ತಮಗೆ ಗೊತ್ತಿದೆ. ಪುಸ್ತಕದಲ್ಲೇನು ಗ್ರಾಮಪಂಚಾಯಿತಿಯ ಪರಿಸ್ಥಿತಿ ಇದೆ, ವಾಸ್ತವಿಕವಾಗಿ ಏನಿದೆ ಎಂಬುದು ತಮಗೆಲ್ಲರಿಗೂ ಗೊತ್ತಿದೆ. ನಿಯಮ 69ರ ಅಡಿಯಲ್ಲಿ ಇದರ ಬಗ್ಗೆ ವಿರೋಧಪಕ್ಷದ ನಾಯಕರು, ನಮ್ಮ ಪಕ್ಷದಿಂದ ಕೊಟ್ಟಂಥ ಸಂದರ್ಭದಲ್ಲಿ ಕೊನೆಯ ಪಕ್ಷ ಸರ್ಕಾರವು ಅಂಕಿಅಂಶಗಳೊಂದಿಗೆ ಹೇಳಿಕೆಯನ್ನು ಕೊಡುತ್ತದೆ ಎಂದು ತಿಳಿದುಕೊಂಡಿದ್ದೆವು.

ಅದನ್ನೂ ಕೊಡಲಿಲ್ಲ. ಕನಿಷ್ಟ ಸದನದ ಸಮಿತಿಯನ್ನು ಮಾಡುವುದಾಗಲಿ, ಕೇಂದ್ರ ಸರ್ಕಾರಕ್ಕೆ ನಿಯೋಗವೊಂದನ್ನು ತೆಗೆದುಕೊಂಡು ಹೋಗುವ ಕೆಲಸವನ್ನಾಗಲಿ ಇದುವರೆಗೆ ಮಾಡಿಲ್ಲ. ಆಡಳಿತ ಪಕ್ಷದ ಶಾಸಕರಾಗಿರುವ ಮಾನ್ಯ ಬೋಸ ರಾಜುರವರು ಕೇಂದ್ರ ಸರ್ಕಾರಕ್ಕೆ ನಾವೆಲ್ಲ ಹೋಗಿ ಒತ್ತಡವನ್ನು ತೆಗೆದುಕೊಂಡು ಬರೋಣವೆಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಕೇಂದ್ರ ಸರ್ಕಾರದಲ್ಲಿ ನಮ್ಮ ಪಕ್ಷವೂ ಇದ್ದು ಅದರಲ್ಲಿ ನಮ್ಮದೂ ಜವಾಬ್ದಾರಿ ಇದೆ. ಆದರೆ ನಮ್ಮ ಕರ್ತವ್ಯವನ್ನು ನಾವು ಮಾಡಿದ್ದೇವೆ. ಅಧಿಕಾರಿಗಳಿಂದ ತಾವು ಏನಾದರೂ ಪ್ರಗತಿಯನ್ನು ನಿರೀಕ್ಷೆ ಮಾಡಿದ್ದರೆ ತಪ್ಪು. ಒಬ್ಬರು ಐ.ಎ.ಎಸ್ ಅಧಿಕಾರಿಯನ್ನು ಡಬ್ಲ್ಯೂಟಿಓ ದಿಂದ ಏನು ಮಾಡಬೇಕು ಎಂಬ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ರಿಪ್ರಸೆಂಟ್ ಮಾಡಲು ನೇಮಕ ಮಾಡಿದ್ದಾರೆ. ಅವರು ಆರು ತಿಂಗಳ ಹಿಂದೆ ಶಿಕ್ಷಣ ಇಲಾಖೆಯಲ್ಲಿ ಇದ್ದರು, ಅದಕ್ಕೂ ಮೊದಲು ಪರಿಸರ ಮಾಲಿನ್ಯ ಇಲಾಖೆಯಲ್ಲಿ, ಕೆ.ಎಸ್.ಆರ್.ಟಿ.ಸಿ.ಯಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಪ್ರಾಮಾಣಿಕರು ಎಂಬುದರಲ್ಲಿ, ಒಳ್ಳೆಯ ಕೆಲಸಗಾರರು ಎಂಬುದರಲ್ಲಿ ಸಂಶಯವಿಲ್ಲ. ಆದರೆ ತಾವು ರೈತರ ಸಮಸ್ಯೆನ್ನು ಪರಿಹಾರ ಮಾಡಲು ಅದರ ಮೇಲೆ ಅವಲಂಬಿಸಿದ್ದರೆ ರೈತರಿಗೆ ನಾಮವನ್ನು ಹಾಕಿಬಿಡುತ್ತೀರಿ. ತಾವು ಪ್ರಾಕ್ಟಿಕಲ್ ಆಗಿ ಅನುಭವವನ್ನು ಹೊಂದಿರುವ ಜನರನ್ನು ತೆಗೆದುಕೊಳ್ಳಬೇಕು. ಸೆಪ್ಟಂಬರ್ 20ರಂದು ಕೇಂದ್ರ ಕೃಷಿ ಸಚಿವರಾಗಿರುವ ಶ್ರೀ ಸತೀಶ್ ಕುಮಾರ್‌ರವರು ತಮ್ಮೆಲ್ಲರನ್ನು ಕರೆಸಿದ್ದರು. ತಾವು ಹೋಗಿದ್ದರೆ ಸಂತೋಷ. ಆದರೆ ತಾವು ಇದುವರೆಗೆ ಒಂದು ನಿಯೋಗವನ್ನು ಕೇಂದ್ರ ಸರ್ಕಾರಕ್ಕೆ ತೆಗೆದುಕೊಂಡು ಹೋಗಿ ಒತ್ತಡವನ್ನೇನು ತಂದಿಲ್ಲ. ತಮಗೆ ಇದುವರೆಗೆ ವೀರಪ್ಪನ್ ಜ್ವರವಿತ್ತು. ಬಹುಶಃ ಆ ಜ್ವರ ಇವತ್ತಿನಿಂದ ಹೋಗುತ್ತದೆಂದು ನಾನು ಭಾವಿಸುತ್ತೇನೆ. ಪ್ರೊ ಚಂದ್ರಶೇಖರ್ ರವರನ್ನು ನಾನು ಮೆಚ್ಚುತ್ತೇನೆ. ತಾವು ಹಿಪೊಕ್ರಾಟಿಕ್ ಆಗಿಲ್ಲ. ತಾವು ಬಿಬಿಸಿಯಲ್ಲಿ ಮಾತನಾಡುವುದನ್ನೆಲ್ಲ ಗಮನಿಸುತ್ತಿದ್ದೇನೆ. ತಾವು ಪ್ರಜಾವಾಣಿಯಲ್ಲಿ ಅಂಕಣಕಾರರಾಗಿ ಬರೆಯುತ್ತಿದ್ದನ್ನೆಲ್ಲ ಗಮನಿಸಿದ್ದೇನೆ.

ಶ್ರೀ ಡಿ.ಬಿ. ಚಂದ್ರೇಗೌಡ :— ತಾವು ಮಾತನಾಡುವಾಗ ಯಾರನ್ನಾದರೂ ಬೈದಿದ್ದೀರಾ ಎಲ್ಲರನ್ನೂ ಸ್ನೇಹಿತರು ಎಂದೇ ಹೇಳುತ್ತೀರಿ.

ಶ್ರೀ ಪಿ.ಜಿ.ಆರ್. ಸಿಂಧ್ಯ :— ಹಾಗಿದ್ದರೆ ತಾವು ನನ್ನ ಶತ್ರುಗಳೆ? ನೀವು ನನ್ನ ಪಕ್ಷದಲ್ಲಿ ಇದ್ದಿರಿ, ವಿರೋಧ ಪಕ್ಷದ ನಮ್ಮ ನಾಯಕರಾಗಿದ್ದೀರಿ, ನಿಮ್ಮ ಕೈಕೆಳಗಡೆ ನಾನು ನಾಲ್ಕು ವರ್ಷ ಉಪನಾಯಕನಾಗಿ ಕೆಲಸ ಮಾಡಿದ್ದೇನೆ, ಹಾಗಿದ್ದಮೇಲೆ ನಿಮ್ಮನ್ನು ಸ್ನೇಹಿತರು ಎಂದು ಹೇಳದೆಯೇ ಶತ್ರುಗಳು ಎಂದು ಹೇಳಲು ಆಗುತ್ತದೆಯೇ? ಪ್ರೊ. ಚಂದ್ರಶೇಖರ್‌ರವರು ನಮ್ಮ ಜೊತೆಯಲ್ಲೇ ಇದ್ದರು, ಆದರೆ ಅವರು ಯಾವುದೇ ಅಧಿಕಾರವನ್ನು ಅನುಭವಿಸಿರಲಿಲ್ಲ. ವಿಧಾನಪರಿಷತ್ತಿಗೆ ಅವರನ್ನು ನಾಮಕರಣ ಮಾಡಿದ್ದವು. ಅವರು ಅಧಿಕಾರ ಇಲ್ಲದಿದ್ದಾಗ ನಮ್ಮನ್ನು ಬಿಟ್ಟು ಹೋಗಿದ್ದಾರೆ. ಅಧಿಕಾರವಿದ್ದಾಗಲು ಕೆಲವರು ಬಿಟ್ಟುಹೋಗಿದ್ದಾರೆ. ಅವರನ್ನೆಲ್ಲ ನಾನು ಶತ್ರುಗಳು ಎಂದು ಹೇಳಲೆ? ವೈ.ಕೆ. ರಾಮಯ್ಯನವರು ಶತ್ರುವೆ? ಅಥವಾ ನೀವೆಲ್ಲರೂ ನನಗೆ ಮಿತ್ರರಾ?

ಶ್ರೀ ವೈ.ಕೆ. ರಾಮಯ್ಯ :— ಮಾನ್ಯ ವೈಸ್ ಛೇರ್ಮನ್‌ರವರೆ, ಇವರು ನನ್ನ ಹೆಸರನ್ನು ತರುತ್ತಾರೆ ಎಂದು ನನಗೆ ಮೊದಲೇ ಗೊತ್ತಿತ್ತು. ಸಿಂಧ್ಯಾರವರು ಬೇರೆಯವರು ಹೋದರು ಎಂದು ಹೇಳುತ್ತಾರೆಯೇ ಹೊರತು ಹೊರಕ್ಕೆ ನೂಕಿದೆವು ಎಂದು ಯಾರನ್ನು ಉದ್ದೇಶಿಸಿಯೂ ಹೇಳಲಿಲ್ಲವಲ್ಲ? ಎಸ್.ಎಂ. ಕೃಷ್ಣರವರು ವೈ.ಕೆ. ರಾಮಯ್ಯನವರಿಗೆ 48 ಲಕ್ಷ ಹಣವನ್ನು ಕೊಟ್ಟಿದ್ದಾರೆ ಎಂದು ಹೇಳಿದಂಥಕ್ಕೆ ಅವರು ಸಾಕ್ಷಿಯಾಗಿದ್ದಾರೆ. ವೈ.ಕೆ. ರಾಮಯ್ಯ ಆ ಪರಿಸ್ಥಿತಿಯಲ್ಲಿ ಅವರ ಜೊತೆ ಇರಬೇಕಾಗಿತ್ತೇ ಅಥವಾ ಇಲ್ಲವೇ ಎಂಬ ಬಗ್ಗೆ ಆತ್ಮಸಾಕ್ಷಿಯಾಗಿ ಮಾತನಾಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಮಾನ್ಯ ರಾಮಯ್ಯನವರ ಬಗ್ಗೆ ನಮಗೆಲ್ಲ ಬಹಳ ಸಿಂಪತಿ ಇದೆ. ಆದರೆ ಹನಿಮೂನ್ ಅವಧಿಯಲ್ಲಿ ಸಂತೋಷ ಪಡದೆ ಇನ್ಯಾವಾಗ ಸಂತೋಷ ಪಡುತ್ತಾರೆ?

ಶ್ರೀ ವೈ.ಕೆ. ರಾಮಯ್ಯ :— ಗುಣದಲ್ಲಿ ಹೇಗೆ ವಿಭಿನ್ನತೆ ಇರುತ್ತದೋ ಹಾಗೆಯೇ ಪ್ರವೃತ್ತಿಯಲ್ಲೂ ವಿಭಿನ್ನತೆ ಇರುತ್ತದೆ. ಮಾನ್ಯ ಜೆ.ಹೆಚ್. ಪಟೇಲರು, ನಾನು ನಮ್ಮ ಗುಂಪೇ ಬೇರೆ, ನಾವು ಹುಚ್ಚರು ನಾವು ಬೇರೆ ಕಡೆಗೆ ಹೋಗುತ್ತೇವೆ. ಹನಿಮೂನ್ ಎಂದರೆ ತಮ್ಮ ಅರ್ಥದಲ್ಲಿ ಏನೋ ಎಂದು ನನಗೆ ಅರ್ಥವಾಗಲಿಲ್ಲ. ನನ್ನ ಅರ್ಥದಲ್ಲಿ ನಾನು ಹನಿಮೂನ್‌ನಲ್ಲೇ ಇದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :— ಹನಿಮೂನ್ ಎಂಬ ಪದವನ್ನು ನಾನು ಹೇಳಲಿಲ್ಲ. ನಮ್ಮ ಸರ್ಕಾರ ಇನ್ನೂ ಹನಿಮೂನ್ ಅವಧಿಯಲ್ಲಿದೆಯೆಂದು ಅವರೇ ಹೇಳಿದ್ದು. ಆದರೆ ಇವರ ನಾಯಕರಾದ ಕೃಷ್ಣರವರೇ ಹನಿಮೂನ್ ಅವಧಿ ಮುಗಿಯಿತು, ಈಗ ಆಕ್ಟನ್ ಅವಧಿಯೆಂದು ಹೇಳಿದ್ದಾರೆ. ನಾನು ತಮ್ಮ ಸ್ನೇಹಿತನಾಗಿ ಹನಿಮೂನ್ ಅವಧಿಯಲ್ಲಿ ತಾವು ಸಂತೋಷಪಡುತ್ತಿಲ್ಲವಲ್ಲ ಎಂದು ನನಗೆ ಸಂಕಟವಾಗುತ್ತಿದೆ. ಇಂಥ ಸ್ನೇಹಿತರುಗಳು ಇರುವಾಗ ಇವರನ್ನು ಶತ್ರುಗಳು ಎಂದು ಕರೆಯಲೆ? ಅಥವಾ ಮಿತ್ರರು ಎಂದು ಕರೆಯಲೆ?

ಛೇರ್ಮನ್ :— ತಾವು ನಾಳೆಗೆ ಮುಂದುವರೆಸಿ. ಇಲ್ಲಿಗೆ ಸಭೆಯು ಮುಕ್ತಾಯಗೊಳ್ಳುತ್ತದೆ. ಮತ್ತೆ ನಾಳೆ ಬೆಳಗ್ಗೆ 10-30ಕ್ಕೆ ಸಮಾವೇಶಗೊಳ್ಳುವುದು.

(ಸದನವು ಸಂಜೆ 6 ಗಂಟೆ 30 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ದಿನಾಂಕ 17-11-2000ರ ಶುಕ್ರವಾರದಂದು ಬೆಳಗ್ಗೆ 10-30 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)